ಫೆಬ್ರವರಿ 2019
ಸಂಪುಟ 15
ಸಂಚಿಕೆ 02

# ಸ್ನೇಹ ಚಿಂತನೆ

ಮಾಸ ಪತ್ರಿಕೆ

www.buntsanghablr.com

## ಬಂಟರ ಸಂಘ ಬೆಂಗಳೂರು
## BUNTS' SANGHA BANGALORE
(A Charitable Institution)






BSRNS ವಿದ್ಯಾನಿಕೇತನ II ಶಿಲಾನ್ಯಾಸ ಕಾರ್ಯಕ್ರಮ






ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ



ವರಸಿದ್ಧಿ ವಿನಾಯಕ
ಮಂದಿರದ ವಾರ್ಷಿಕೋತ್ಸವ

ಸಂಚಿಕೆ ಬೆಲೆ
ರೂ 1/-

324, Chord Road, Vijayanagara, Bengaluru - 560 040.
Ph: 080 2339 9323, 2339 9635, E: info@buntsanghablr.com


SEASONS GREETINGS
from
25 YEARS
Swathi
GROUP
Your Happiness is our Priority
We ensure to meet the needs of our guests by providing excellent facilities. Being the best business hotel in Bengaluru, Attide hotels blends comfort and luxury to give an unparalleled experience which makes our guests visit us again in there next trip.
Attide Boutique Hotel
Swathi Group of Restaurants
Swathi Caterers
#5, West of Chord Road, Rajaji Nagar, Bengaluru - 560086 9900013400 / 8023595555
sr24@swathigroup.co.in | catering@swathigroup.co.in | info24@swathigroup.co.in swathigroup.co.in

ADVT

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 15** **FEBRUARY 2019** **ISSUE 02**

**ಸಾಹಿತ್ಯ–ಪ್ರಕಾಶನ ಸಮಿತಿ**

ಚೇರ್‌ಪರ್ಸನ್ :
**ಶ್ರೀ ಮುರಲೀಧರ ಹೆಗ್ಡೆ**

ಗೌ॥ ಸಂಪಾದಕರು :
**ಶ್ರೀಮತಿ ರಾಜಶ್ರೀ ಕೆ. ಶೆಟ್ಟಿ**

ಸಲಹಾ ಮಂಡಳಿ :
**ಶ್ರೀ ಎ. ಗಿರೀಶ್ ರೈ**
**ಶ್ರೀ ಸತ್ಯಾನಂದ ಮೇಲಾಂಟ ಎನ್.**
**ಶ್ರೀ ಪ್ರಕಾಶ್ ಶೆಟ್ಟಿ**

ಸಂಪಾದಕ ಮಂಡಳಿ :
**ಶ್ರೀ ಸುಧಾಕರ ಶೆಟ್ಟಿ, ಅಚ್ಲಾಡಿ**
**ಶ್ರೀಮತಿ ಸ್ಮಿತಾ ಬಲ್ಲಾಳ್**
**ಶ್ರೀಮತಿ ನಿರ್ಮಲಾ ಸಿ. ರೈ**
**ಶ್ರೀ ಸತೀಶ್ ಶೆಟ್ಟಿ, ವಕ್ವಾಡಿ**

ಸಹಕಾರ :
**ಕುಮಾರಿ ಶಾಲ್ಮಲೀ ಸುರೇಶ್**

ಪೋಷಕ ಸದಸ್ಯರು :
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು :
**ಮಧುಕರ ಎಂ. ಶೆಟ್ಟಿ**

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

**–ಸಂಪಾದಕಿ**

## ಒಳ ಪುಟಗಳಲ್ಲಿ...

| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌರವ ಕಾರ್ಯದರ್ಶಿಗಳ ವರದಿ | 4 |
| 4. | ತಾಯಿ | 7 |
| 5. | ಕನ್ನಡ ವೈಭವ | 8 |
| 6. | ಶಾಪ | 10 |
| 8. | LIVE IT, LOVE IT, VALUE IT | 15 |
| 7. | ಯುಗ ಪುರುಷ ವಿವೇಕಾನಂದ | 27 |
| 9. | ಊರ ತೇರಿನ ನೆಪದಲ್ಲಿ... | 31 |
| 10. | ವಿಶ್ವ ವಿಜ್ಞಾನಕ್ಕೆ ಭಾರತದ ಕೊಡುಗೆ | 33 |

**ಮುಖಪುಟ**

**ಬಿ.ಎಸ್.ಆರ್.ಎನ್.ಎಸ್. ವಿದ್ಯಾನಿಕೇತನದ-II**
**ಶಿಲಾನ್ಯಾಸ ಕಾರ್ಯಕ್ರಮ ಮತ್ತು**
**ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು**
**ಸಾಂಸ್ಕೃತಿಕ ದಿನಾಚರಣೆ**
**ಶ್ರೀ ವರಸಿದ್ಧಿ ವಿನಾಯಕ ಮಂದಿರದ ವಾರ್ಷಿಕೋತ್ಸವ**

# ಸಂಪಾದಕೀಯ



## ಮನ್ನಣೆಯ ದಾಹ

ಅನ್ನದಾತುರಕಿಂತ ಚಿನ್ನದಾತುರ ತೀಕ್ಷ್ಣ
ಚಿನ್ನದಾತುರಕಿಂತ ಹೆಣ್ಣು ಗಂಡೊಲವು।
ಮನ್ನಣೆಯ ದಾಹವೀಯೆಲ್ಲಕುಂ ತೀಕ್ಷ್ಣತಮ
ತಿನ್ನುವುದಾತ್ಮವನೆ ಮಂಕುತಿಮ್ಮ॥

ಹೊಟ್ಟೆಯ ಹಸಿವು ಯಾವುದೇ ಜೀವಿಯ ಸಹಜಗುಣ. ಬದುಕುವುದಕ್ಕಾಗಿ ತಿನ್ನುವುದು, ಅದಕ್ಕೊಂದು ಮಿತಿಯಿದೆ; ಸಾಕು ಎನ್ನುವ ತೃಪ್ತಿಯಿದೆ. ತಿನ್ನುವುದಕ್ಕಾಗಿಯೇ ಬದುಕುವುದು ಎಂದುಕೊಂಡವರಿಗೂ ಒಮ್ಮೆಗೆ ಹೊಟ್ಟೆ ತುಂಬುತ್ತದೆ. ಒಡವೆ, ಆಸ್ತಿಗಳ ಮೇಲಿನ ಆಸೆ, ಹೆಣ್ಣು–ಗಂಡಿನ ಮೋಹ ಬಹಳ ತೀವ್ರವಾದುದು. ಅವುಗಳನ್ನು ಹೊಂದುವ ಪೈಪೋಟಿಯಲ್ಲಿ ಏನೇನೋ ಅನಾಹುತಗಳು ಸಂಭವಿಸುತ್ತವೆ. ಒಂದು ವೇಳೆ ಹೊರಗಿನ ಈ ಆಕರ್ಷಣೆಗಳಿಂದ ಮನಸ್ಸನ್ನು ಗೆದ್ದುಕೊಂಡರೂ, ಮನ್ನಣೆ, ಕೀರ್ತಿ ಮಾನ್ಯತೆಯ ದಾಹ ವ್ಯಕ್ತಿಯ ಆತ್ಮವನ್ನೇ ತಿನ್ನುವುದಂತೆ. ತನ್ನ ಅಂತರ್ಯದಲ್ಲಿ ಸಾರ್ವಕಾಲಿಕ ಸತ್ಯವನ್ನು, ಸತ್ವವನ್ನು ಹುದುಗಿಸಿಕೊಂಡು, ಕಾಲದೇಶಾದಿಗಡಿಗಳನ್ನು ಮೀರಿದ ಕೃತಿ, ಕನ್ನಡದ ಭಗವದ್ಗೀತೆ, ಮಂಕುತಿಮ್ಮನ ಕಗ್ಗದಲ್ಲಿ ಡಿವಿಜಿಯವರು ತಿಳಿಸಿರುವ ವಿಚಾರವಿದು.

ಬಲಗೈಯಲ್ಲಿ ನೀಡಿದ ದಾನ ಎಡಗೈಗೂ ತಿಳಿಯಬಾರದು ಎನ್ನುವ ಉಕ್ತಿಯಿದೆ. ದಾನ ಸಮಾಜದ ಋಣ ತೀರಿಸುವುದಕ್ಕಾಗಿ, ಆತ್ಮ ತೃಪ್ತಿಗಾಗಿ; ಆದ್ದರಿಂದ ಪ್ರಚಾರ ಸಲ್ಲದು ಎನ್ನುವ ಅರ್ಥ. ಅಂತೆಯೇ ಸೇವೆಯೂ.

ಇಂದಿನ ಇ–ಮಾಧ್ಯಮ ಯುಗದಲ್ಲಿ ಪ್ರಚಾರ ಗಿಟ್ಟಿಸುವುದಕ್ಕೆ ಹೆಚ್ಚೇನೂ ಕಷ್ಟಪಡಬೇಕಾಗಿಲ್ಲ. ಪ್ರಧಾನಮಂತ್ರಿಯೋ ಅಥವಾ ಇತರ ಪ್ರಮುಖ ಸಾಮಾಜಿಕ ವ್ಯಕ್ತಿಗಳ ಪ್ರವಾಸ ವೇಳಾಪಟ್ಟಿ ಪತ್ರಿಕೆಯಲ್ಲಿ ಪ್ರಕಟವಾಗುವ ಕಾಲವಿತ್ತು. ಇಂದಿನ ದಿನಗಳಲ್ಲಿ ಅತ್ಯಂತ ಸಾಮಾನ್ಯ ವ್ಯಕ್ತಿಯೋ ತಾನು ಎಲ್ಲೆಲ್ಲಿ ಅಡ್ಡಾಡಿದೆ, ಯಾವ ಸಿನೆಮಾ ನೋಡಿದೆ, ಊಟ ಮಾಡಿದ ಹೋಟೆಲ್ ಯಾವುದು, ಯಾರು ಜೊತೆಗಿದ್ದರು ಎನ್ನುವ ಸರ್ವ ವಿವರಗಳನ್ನು ಯಾವುದೇ ಖರ್ಚಿಲ್ಲದೆ ಜಗಜ್ಜಾಹೀರುಗೊಳಿಸಬಹುದು. ಅದೊಂದು ಚಟವಾಗಿ ಪರಿಣಮಿಸಿದೆ. ಅದಕ್ಕೊದಗಿಬರುವ "ಲೈಕ್"ಗಳು, "ಕಮೆಂಟ್"ಗಳಿಗಾಗಿ ಕಾಯುವುದಿದೆಯಲ್ಲ, ಅದುವೇ ಮನ್ನಣೆಯ ದಾಹ! ಸಾಕಷ್ಟು ಲೈಕ್‌ಗಳು ಬಂದಿಲ್ಲವೆಂದು ಆತ್ಮಹತ್ಯೆ ಮಾಡಿಕೊಳ್ಳುವ ಸುದ್ದಿಗಳೂ ಬರಬಹುದಾದ ದಿನಗಳು ದೂರವಿಲ್ಲ. ಇನ್ನು ಪ್ರತಿಕ್ರಿಯಿಸುವವರಿಗೆ ಆಗುವ ಲಾಭವೇನೋ? ಬಹುಶಃ ಕೊಡು–ಕೊಳ್ಳುವಿಕೆಯ ಒಂದು ಲೆಕ್ಕಾಚಾರ. ಎದುರು ಬದುರಾದಾಗ "ಫೇಸ್" ನೋಡದ "ಫೇಸ್‌ಬುಕ್" ಸ್ನೇಹಿತರು, ಸಂಖ್ಯಾಲಾಭಕ್ಕಾಗಿ!

"ಸಮಾಜ ಸೇವಕರು" ಎಂದು ಹೆಸರಿನ ಜೊತೆಯಲ್ಲಿ ಬರೆದುಕೊಳ್ಳುವವರು ಬಹಳಷ್ಟು ಮಂದಿ. ಅದರಿಂದ ಸಮಾಜಕ್ಕಾಗುವ ನಷ್ಟವೇನೂ ಇಲ್ಲ. ಆದರೆ ತಾನು ಮಾಡಿದ ದಾನ, ಸೇವೆಗಳ ಪಟ್ಟಿಯನ್ನೇ ನೀಡಿ ತನ್ನನ್ನು ಸಂಬಂಧಪಟ್ಟವರು ಆದರಿಸಲಿಲ್ಲ, ಸಮಾಜ ಗೌರವಿಸಲಿಲ್ಲ ಎನ್ನುತ್ತಾ ಕೊರಗುವುದು, ಸಿಟ್ಟು, ದ್ವೇಷ, ಅಸಹನೆಯಿಂದ ಸಿಡಿಯುವುದಿದೆಯಲ್ಲಾ ಅದಕ್ಕೇ ಹೇಳಿರುವುದು "ಮನ್ನಣೆಯ ದಾಹ.... ತಿನ್ನುವುದಾತ್ಮವನೆ" ಎಂದು. ಸಾಧಕರಿಗೆ, ಸೇವಕರಿಗೆ ನೀಡುವಂತಹ ಹಲವಾರು ರಾಜ್ಯ, ರಾಷ್ಟ್ರ ಪ್ರಶಸ್ತಿಗಳನ್ನು ಸ್ವತಃ ಅರ್ಜಿ ಹಾಕಿ ಪಡೆಯಬೇಕಾಗಿರುವುದು ಇಂದಿನ ವ್ಯವಸ್ಥೆಯ ಕುಹಕ. ನೈಜ ಸೇವಕರನ್ನು ಸಮಾಜವೇ ಗುರುತಿಸುತ್ತದೆ. ಮಾನವೀಯತೆಯ ಮೂರ್ತರೂಪವಾಗಿದ್ದ ಸಿದ್ಧಗಂಗಾ ಶ್ರೀಗಳ ಧರ್ಮಾತೀತವಾದ ಪ್ರೀತಿ, ಸೇವೆಯ ಹೃದ್ಯ ಅನುಭೂತಿಯನ್ನು ಗಳಿಸಿದ ಸಹಸ್ರಾರು ಮಕ್ಕಳ, ಅಸಂಖ್ಯ ಭಕ್ತರ, ಸಮಸ್ತ ಸಮಾಜದ ಆದರಣೆಗಿಂತ ಮಿಗಿಲಾದ "ಭಾರತ ರತ್ನ"ವುಂಟೇ?

ಇನ್ನು, ಮನ್ನಣೆಗಾಗಿಯೇ ದಾನ ಮಾಡುವ ಒಂದು ವರ್ಗವಿದೆ. ನೈತಿಕವೋ, ಅನೈತಿಕವೋ ಯಾವುದೋ ರೀತಿಯಲ್ಲಿ ಸಂಪತ್ತನ್ನು ಕೂಡಿಟ್ಟು ಬಡವರಿಗೆ, ಅಗತ್ಯವಿರುವವರಿಗೆ ನೀಡದೆ ಎಲ್ಲಿ ಪ್ರಚಾರ ಸಿಗುತ್ತದೋ ಎಲ್ಲಿ ಹೆಸರು ರಾರಾಜಿಸುತ್ತದೇ ಅಲ್ಲಿ ಮಾತ್ರ ನೀಡಿ ಬಹಳ ದೊಡ್ಡ ದಾನಿಗಳೆನಿಸಿಕೊಳ್ಳುವುದು. ಹಾಗಿದ್ದೂ ಇದರಿಂದ ಸಮಾಜಕ್ಕೆ ಒಳಿತಾಗುವುದಾದರೆ, ಅದು ಒಳ್ಳೆಯದೇ. ಸರ್ಫ್ ಎಕ್ಸೆಲ್‌ನ ಜಾಹೀರಾತೊಂದು ನೆನಪಾಗುತ್ತದೆ "ದಾಗ್ ಲಗ್‌ನೇ ಸೇ ಕೋಈ ಅಚ್ಛಾ ಹೋತಾ ಹೈ ತೋ ದಾಗ್ ಅಚ್ಛಾ ಹೈ".

**ಶ್ರೀಮತಿ ರಾಜಶ್ರೀ ಕೆ. ಶೆಟ್ಟಿ**

# ಅಧ್ಯಕ್ಷರ ಮಾತು



ಆತ್ಮೀಯ ಸದಸ್ಯರೇ,

ಶ್ರೀ ವರಸಿದ್ಧಿವಿನಾಯಕ ಮಂದಿರದ ವಾರ್ಷಿಕೋತ್ಸವ ಪ್ರಯುಕ್ತ ದಿನಾಂಕ 19.01.2019 ರಂದು ನಡೆದ ಪೂಜಾ ಕಾರ್ಯದಲ್ಲಿ ಭಾಗವಹಿಸಿದ ಹಾಗೂ ಉದಾರದೇಣಿಗೆ ನೀಡಿದ ಭಕ್ತ ವೃಂದಕ್ಕೂ ಮತ್ತು ದಿನಾಂಕ 20.01.2019 ರಂದು ಯಲಚಗುಪ್ಪೆ ಜಮೀನಿನಲ್ಲಿ ನಡೆದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ ಹಾಗೂ ಬಂಟರ ಸಂಘ ಆರ್.ಎನ್.ಎಸ್.ವಿದ್ಯಾನಿಕೇತನ-II ರ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿನಲ್ಲಿ ಪಾಲುದಾರರಾದ ಅತಿಥಿಗಣ್ಯರು ಹಾಗೂ ಹಿರಿಯ-ಕಿರಿಯ ಸದಸ್ಯ ಬಾಂಧವರೆಲ್ಲರಿಗೂ ಹೃತ್ಪೂರ್ವಕ ನಮನಗಳು.

**ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ.**

ಸಂಘದ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ಪ್ರವೇಶಕ್ಕಾಗಿ ವರ್ಷದಿಂದ ವರ್ಷಕ್ಕೆ ಬೇಡಿಕೆ ಹೆಚ್ಚುತ್ತಿದೆ. ಕೊಠಡಿಗಳ ಸಂಖ್ಯೆ ಕಡಿಮೆ ಇರುವುದರಿಂದ ಪ್ರತೀ ತರಗತಿಯಲ್ಲಿ ನಿಗದಿತ ಸಂಖ್ಯೆಗಿಂತ ಹೆಚ್ಚು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗುತ್ತಿದೆ. ಇದರಿಂದ ಶಿಕ್ಷಕರಿಗೆ ಪ್ರತೀ ಮಗುವಿಗೂ ಹೆಚ್ಚಿನ ಗಮನ ನೀಡುವುದು ಸ್ವಲ್ಪ ಕಷ್ಟಕರವಾಗಿದೆ. ಆದ್ದರಿಂದ ಪ್ರತೀ ತರಗತಿಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯನ್ನು ಆದಷ್ಟು ಕಡಿಮೆಗೊಳಿಸುವ ಸಲುವಾಗಿ ಸುತ್ತಮುತ್ತಲಿನ ಪರಿಸರದಲ್ಲಿ ಸೂಕ್ತ ಬಾಡಿಗೆ ಕಟ್ಟಡಗಳಲ್ಲಿ ಕೆಲವೊಂದು ತರಗತಿಗಳನ್ನು ನಡೆಸಲು ಯೋಚಿಸಲಾಗುತ್ತಿದೆ.

ಮುಂದಿನ ಶೈಕ್ಷಣಿಕ ವರ್ಷದಿಂದ ಮಾಂಟೆಸರಿ ತರಗತಿಗಳ ವಿದ್ಯಾರ್ಥಿಗಳಿಗೆ ಶಾಲಾ ಸಮಯದಲ್ಲಿ ಪ್ರತ್ಯೇಕ ಎರಡು ವಿಭಾಗಳನ್ನಾಗಿ ಮಾಡುವುದರ ಮೂಲಕ ಪ್ರತೀ ತರಗತಿಯಲ್ಲಿ ನಿಗದಿತ ಸಂಖ್ಯೆಯ ವಿದ್ಯಾರ್ಥಿಗಳು ಮಾತ್ರ ಇರುವಂತೆ ಮಾರ್ಪಾಡು ಮಾಡಲಾಗುವುದು.

'Academy for Creative Teaching' ಸಂಸ್ಥೆಯಿಂದ ಪ್ರಾಥಮಿಕ ವಿಭಾಗದ ಶಿಕ್ಷಕರ ಕಲಿಕಾ ವಿಧಾನ ಹಾಗೂ ಬೋಧನಾ ಕೌಶಲ್ಯದ ಬಗ್ಗೆ ಮೌಲ್ಯಮಾಪನ ಮಾಡಿ ವರದಿ ಪಡೆಯಲಾಗಿದ್ದು, ವರದಿಯ ಆಧಾರದ ಮೇಲೆ ಅಗತ್ಯವಿರುವ ಶಿಕ್ಷಕರಿಗೆ ಕಲಿಕಾ ವಿಧಾನ ಹಾಗೂ ಬೋಧನಾ ಕೌಶಲ್ಯವನ್ನು ಹೆಚ್ಚಿಸುವಲ್ಲಿ ಅಗತ್ಯ ತರಬೇತಿಯನ್ನು ಶೀಘ್ರದಲ್ಲಿ ನೀಡಲು ತೀರ್ಮಾನಿಸಲಾಗಿದೆ. ಹಾಗೆಯೇ ನರ್ಸರಿ ಹಾಗೂ ಪ್ರಾಥಮಿಕ ವಿಭಾಗದ ಶಿಕ್ಷಕರ ಸಂವಹನ ಕೌಶಲ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅಗತ್ಯವಿರುವ ಶಿಕ್ಷಕರಿಗೆ 'Regional School of English' ಸಂಸ್ಥೆಯ ಮೂಲಕ ತರಬೇತಿ ಕಾರ್ಯಕ್ರಮ ಪ್ರಾರಂಭಗೊಂಡಿದೆ. ಒಟ್ಟಾರೆ ನಮ್ಮ ಶಿಕ್ಷಣ ಸಂಸ್ಥೆಯಲ್ಲಿ ಉನ್ನತ ಮಟ್ಟದ ಶಿಕ್ಷಣ ಹಾಗೂ ಇನ್ನಿತರ ಸೌಲಭ್ಯದೊಂದಿಗೆ ಮಕ್ಕಳನ್ನು ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚು ಪಾಲ್ಗೊಳ್ಳುವಂತೆ ಪ್ರೇರೇಪಿಸುವುದು ಕೂಡ ನಮ್ಮ ಗುರಿಗಳಲ್ಲೊಂದು.

ನಮ್ಮ ಸಂಸ್ಥೆಯಲ್ಲಿ ಸಿಬಿಎಸ್ಇ (Central Board of Secondary Education) ಪಠ್ಯಕ್ರಮವನ್ನು ಅನುಸರಿಸುವಂತೆ ಹಲವಾರು ಪೋಷಕರ ಬೇಡಿಕೆಯನ್ನು ಪರಿಗಣಿಸಿ ಮುಂದಿನ ಶೈಕ್ಷಣಿಕ ವರ್ಷದಿಂದ ಐಸಿಎಸ್ಇ (Indian Certificate of Secondary Education) ಪಠ್ಯಕ್ರಮ ಮುಂದುವರಿಸುವುದರೊಂದಿಗೆ ಸಿಬಿಎಸ್ ಪಠ್ಯಕ್ರಮವನ್ನು ಸಹ ಅಳವಡಿಸಲಾಗುವುದು. ಇದರಿಂದ ವಿದ್ಯಾರ್ಥಿಗಳು ತಮಗೆ ಬೇಕಾದ ಪಠ್ಯಕ್ರಮವನ್ನು ಆಯ್ಕೆಮಾಡಿಕೊಳ್ಳಬಹುದಾಗಿದೆ.

ಯುನೈಟೆಡ್ ಕಿಂಗ್‌ಡಮ್‌ನಿಂದ ಮಾನ್ಯತೆ ಪಡೆದ ಹಾಗೂ University of Cambridge International Examinations ಅಭಿವೃದ್ಧಿಪಡಿಸಿದ ಐಜಿಸಿಎಸ್ಇ(International General Certificate of Secondary Education) ಪಠ್ಯಕ್ರಮವನ್ನು ನಮ್ಮ ವಿದ್ಯಾಸಂಸ್ಥೆಗೆ ತರಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಐಜಿಸಿಎಸ್ಇ ಪಠ್ಯಕ್ರಮವನ್ನು ರಾಜ್ಯದ ಕೆಲವೇ ಕೆಲವು ಪ್ರತಿಷ್ಠಿತ ಶಾಲೆಗಳಲ್ಲಿ ಅಳವಡಿಸಲಾಗಿದ್ದು, ನಮ್ಮ ಸಂಸ್ಥೆಯಲ್ಲಿ ಈ ಪಠ್ಯಕ್ರಮ ಜಾರಿಗೊಂಡರೆ ನಮ್ಮ ವಿದ್ಯಾಸಂಸ್ಥೆಯ ಹಿರಿಮೆಗೆ ಇನ್ನೊಂದು ಹೆಮ್ಮೆಯ ಗರಿ ಮೂಡಲಿದೆ.

ನಮ್ಮ ಶೈಕ್ಷಣಿಕ ಸಂಸ್ಥೆಗೆ ಪ್ರವೇಶ ಪಡೆಯುವ ಪ್ರತೀ ಬಂಟ ವಿದ್ಯಾರ್ಥಿಗೂ 2019-20 ಶೈಕ್ಷಣಿಕ ವರ್ಷದಿಂದ ಪ್ರವೇಶ ಶುಲ್ಕ (Admission Fee) ಮನ್ನಾ ಮಾಡಲು ತೀರ್ಮಾನಿಸಿದ್ದು, ಈ ಕ್ರಾಂತಿಕಾರಿ ಹೆಜ್ಜೆಯ ಮೂಲಕ ಹೊಸತಾಗಿ ನಮ್ಮ ಶೈಕ್ಷಣಿಕ ಸಂಸ್ಥೆ ಸೇರುವ ಬಂಟರಿಗೆ ಅನುಕೂಲವಾಗಲಿದೆ.

ನಾವು ಹಮ್ಮಿಕೊಂಡ ಯೋಜನೆಗಳನ್ನು ನಿಗದಿತ ಸಮಯದಲ್ಲಿ ಪಾರದರ್ಶಕವಾಗಿ ಹಾಗೂ ದಕ್ಷತೆಯಿಂದ ಕಾರ್ಯಗತಗೊಳಿಸುವಲ್ಲಿ ತಮ್ಮ ಸಹಕಾರ - ಸಲಹೆ ಸದಾ ಇರಲಿ,

ವಂದನೆಗಳೊಂದಿಗೆ,

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

# ಗೌರವ ಕಾರ್ಯದರ್ಶಿಗಳ ವರದಿ



" ಪಾತ್ರವರಿತು ದಾನ, ಕ್ಷೇತ್ರವರಿತು ಬೀಜ"

"ಸಿರಿ ಬಂದ ಕಾಲಕ್ಕೆ ಕರೆದು ದಾನವ ಮಾಡು"

ಬಂಟರ ಸಂಘದ ಆರ್.ಎನ್.ಎಸ್ ವಿದ್ಯಾನಿಕೇತನ – II ಇದರ ಶಂಕು ಸ್ಥಾಪನೆ ದಿನಾಂಕ 20.01.2019ರಂದು ಯಲಚಗುಪ್ಪೆಯಲ್ಲಿ ಬಹಳ ಸಂಭ್ರಮದಿಂದ ನಡೆಯಿತು. ಮುಂಜಾನೆ ಪೂಜಾ ಕೈಂಕರ್ಯದೊಂದಿಗೆ ಶುಭ ಮುಹೂರ್ತದಲ್ಲಿ ಯೋಜನಾ ಸಮಿತಿಯ ಚೇರ್‌ಮೆನ್ ಶ್ರೀ ಕೆ. ಪ್ರಕಾಶ್ ಶೆಟ್ಟಿಯವರ ದಿವ್ಯ ಹಸ್ತದಿಂದ ಶಂಕು ಸ್ಥಾಪನೆ ನಡೆಯಿತು.

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಯ ವಿಜೇತರಿಗೆ ಅತಿಥಿಗಳಿಂದ ಬಹುಮಾನ ವಿತರಣೆಯಾಯಿತು. ಹಲವು ವರ್ಷಗಳಿಂದ ವಿದ್ಯಾ ಕ್ಷೇತ್ರಗಳಲ್ಲಿ ಅವಿರತವಾಗಿ ದುಡಿದವರು, ಸಾಧನೆಗೈದವರನ್ನು ವೇದಿಕೆಯಲ್ಲಿ ಸತ್ಕರಿಸಲಾಯಿತು. ಕರ್ನಾಟಕ ಸರ್ಕಾರದ ಮಾನ್ಯ ಗೃಹ ಮಂತ್ರಿಗಳು, ಉನ್ನತ ಶಿಕ್ಷಣ ಸಚಿವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದದ್ದು ಬಹಳ ವಿಶೇಷ. ಸಂಘಕ್ಕೆ ಸದಾ ಸ್ಪಂದಿಸುವ ಹಿರಿಯ ಚೇತನ ಡಾ। ಆರ್.ಎನ್ ಶೆಟ್ಟಿ ಹಾಗೂ ಅನೇಕ ಮಾಜಿ ಅಧ್ಯಕ್ಷರುಗಳು ಮಾರ್ಗದರ್ಶನದ ಜೊತೆಗೆ ಸಮಾರಂಭದ ವೇದಿಕೆಯನ್ನು ಹಂಚಿಕೊಂಡದ್ದು ಕಾರ್ಯಕ್ರಮದ ಅಂದವನ್ನು ಹೆಚ್ಚಿಸಿತು.

ತಾವುಗಳೆಲ್ಲಾ ಹಿರಿಯರು, ಕಿರಿಯರು, ದಾನಿಗಳು ಬಂದು ಶಿಲಾನ್ಯಾಸ ಸಮಾರಂಭಕ್ಕೊಂದು ಹೊಸ ಮೆರುಗನ್ನು ನೀಡಿ. ಮಾತು ನಾಳೆಗಿರಲಿ, ಮುತ್ತು ಶ್ರಾವಣಕ್ಕಿರಲಿ, ಮೌನ ಇಂದಿರಲಿ ಎಂದು ಸಮಾರಂಭದ ಆಮಂತ್ರಣದ ಓಲೆಗೆ ಬೆಲೆ ಕೊಟ್ಟು, ಕಾರ್ಯಕ್ರಮಕ್ಕೆ ಸಾಕ್ಷಿಯಾಗಿ ಅಂದಿನ ಸುಂದರ ಸಂಜೆಗೆ ಅಭಿನವದ ಅಲಂಕಾರ ನೀಡಿದಿರಿ. ತಮ್ಮ ಪರಿಚಯದ ನಗೆ, ಕಣ್ಣ ಕೃತಜ್ಞತೆ, ಅಂತರಂಗದ ಸ್ನೇಹದಿಂದ ಇಡೀ ದಿನ ನಮ್ಮೊಂದಿಗಿದ್ದು, ಸಮಾರಂಭವನ್ನು ಗೆಲ್ಲಿಸಿದ ಹೆಮ್ಮೆ ಹಿರಿಮೆ ತಮಗೆ ಸಲ್ಲುತ್ತದೆ.

ಅಂತಾರಾಷ್ಟ್ರೀಯ ಮಟ್ಟದ ವಿನ್ಯಾಸದ ಸಂಕೀರ್ಣವನ್ನು ಯಲಚಗುಪ್ಪೆಯಲ್ಲಿ ತ್ವರಿತವಾಗಿ ಕಟ್ಟುವ ಬಗ್ಗೆ ಯೋಜನೆಗಳು ನಡೆಯುತ್ತಿವೆ. ಎಲ್ಲಾ ಶಾಲೆಗಳಿಗಿಂತ ವಿಭಿನ್ನವಾದ ಹಸಿರು ಪರಿಸರವನ್ನು ಸೃಷ್ಟಿಸಬೇಕು ಎನ್ನುವ ತವಕ ನಮ್ಮೆಲ್ಲರದು. ಇನ್ನೇನು ಕೆಲವೇ ದಿನಗಳಲ್ಲಿ ಸ್ಪಷ್ಟ ನಕ್ಷೆಯೊಂದಿಗೆ ಕೆಲಸ ಪ್ರಾರಂಭವಾಗಲಿದೆ. ಪ್ರತಿ ತಿಂಗಳು ನಮ್ಮ ಮುಖವಾಣಿ ಸ್ನೇಹ ಚಿಂತನೆಯಲ್ಲಿ ಕಟ್ಟಡದ ಕಾಮಗಾರಿಯ ಬಗ್ಗೆ ಸ್ಪಷ್ಟ ಚಿತ್ರಣ ಹಾಗೂ ವರದಿಯನ್ನು ಪ್ರಕಟಿಸುತ್ತೇವೆ. ಸಂಘ ಹಾಗೂ ಶಾಲೆಯ ಅಭಿವೃದ್ಧಿಗೆ ತಮ್ಮ ಹರಕೆ, ಹಾರೈಕೆ ನೀಡುತ್ತಾ ಸದಾ ಸಂಘದ ಅಭಿವೃದ್ಧಿಯ ಹರಿಕಾರರಾಗಿರಿ ಎಂದು ಆಶಿಸುತ್ತಾ

"ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು"

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ



# ಬಂಟರ ಸಂಘ ಬೆಂಗಳೂರು
# ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 19ನೇ ವಾರ್ಷಿಕೋತ್ಸವ ಸಮಾರಂಭ

ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ ಪ್ರಾಂಗಣದಲ್ಲಿ 19ನೇ ವಾರ್ಷಿಕೋತ್ಸವವನ್ನು ದಿನಾಂಕ 19.01.2019ನೇ ಶುಕ್ರವಾರದಂದು ವಿಜೃಂಭಣೆಯಿಂದ ಆಚರಿಸಲಾಯಿತು.

ನಮ್ಮ ಸಂಘದ ಅಧಿದೇವತೆ ಶ್ರೀ ವರಸಿದ್ಧಿ ವಿನಾಯಕನ ಅನುಗ್ರಹದಿಂದ ನಾವು ಆಯೋಜಿಸಿರುವ ಕೆಲವು ಪ್ರಮುಖ ಕಾರ್ಯಗಳನ್ನು ಈಗಾಗಲೇ ನಿರ್ವಿಘ್ನವಾಗಿ ಪೂರ್ಣಗೊಳಿಸಲಾಗಿದೆ. ಒಂದು ಆಲೋಚನೆ ಹಲವಾರು ಉತ್ತಮ ಕಾರ್ಯಗಳಿಗೆ ಪ್ರೇರಣೆಯಾಗುತ್ತದೆ ಎಂಬುದು ಇದರಿಂದ ವಿಧಿತವಾಗುತ್ತದೆ. ಪೂರ್ವಾಹ್ನ 8.00 ಗಂಟೆಗೆ ಫಲ ಪಂಚಾಮೃತ ಅಭಿಷೇಕ, ಗಣಹೋಮ ಇತ್ಯಾದಿ ಪೂಜಾ ಕಾರ್ಯಕ್ರಮಗಳೊಂದಿಗೆ ಶ್ರೀ ಆರ್. ಉಪೇಂದ್ರ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಹಾಗೂ ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿ ದಂಪತಿಗಳ ಪೂಜಾ ದೀಕ್ಷೆಯೊಂದಿಗೆ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಮೆನ್ ಶ್ರೀ ರಾಜೇಶ್ ಶೆಟ್ಟಿ ಕುತ್ಯಾರು ದಂಪತಿಗಳ ಹಾಗೂ ಸಾವಿರಾರು ಭಕ್ತರ ಉಪಸ್ಥಿತಿಯಲ್ಲಿ ಗಣಹೋಮವನ್ನು ನಡೆಸಲಾಯಿತು.

ಮಧ್ಯಾಹ್ನ 12.00 ಗಂಟೆಗೆ ಮಹಾಮಂಗಳಾರತಿ ನಡೆಯಿತು. ಶ್ರೀಮತಿ ಮಾಲಾ ಭಾಸ್ಕರ ಶೆಟ್ಟಿ ಮತ್ತು ಮತ್ತು ತಂಡದವರಿಂದ ಭಜನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸುಮಾರು 2000 ಮಂದಿ ಭಕ್ತಾಧಿಗಳಿಗೆ ಅನ್ನಸಂತರ್ಪಣೆಯನ್ನು ನೀಡಲಾಯಿತು.

ಸಂಜೆ 5.30ಕ್ಕೆ ಸರಿಯಾಗಿ ಭಜನಾ ಕಾರ್ಯಕ್ರಮವು ಶ್ರೀ ರವಿಶಂಕರ ಗುರೂಜಿಯವರ ಶಿಷ್ಯರಿಂದ (ಚಂದ್ರಕಾಂತ್ ಶೆಟ್ಟಿ) ಅದ್ದೂರಿಯಾಗಿ ನೆರವೇರಿತು.

ಸಂಘದ ಮಾಜಿ ಅಧ್ಯಕ್ಷರುಗಳು, ಮಾಜಿ ಪದಾಧಿಕಾರಿಗಳು, ಮಾಜಿ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸಂಘದ ಹಾಲಿ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಭಾಗವಹಿಸಿ ಶ್ರೀ ವರಸಿದ್ಧಿ ವಿನಾಯಕ ದೇವರ ಕೃಪೆಗೆ ಪಾತ್ರರಾದರು.




ಈ ಸಂದರ್ಭದಲ್ಲಿ ಹಲವಾರು ದಾನಿಗಳು ನಮ್ಮೊಂದಿಗೆ ಕೈ ಜೋಡಿಸಿದ್ದಾರೆ. 2000 ಜನ ಭಕ್ತಾಧಿಗಳಿಗೆ ಅನ್ನಸಂತರ್ಪಣೆಯ ವ್ಯವಸ್ಥೆಯನ್ನು ಸೇವಾ ಕೈಂಕರ್ಯ ರೂಪದಲ್ಲಿ ನೀಡಿದ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿ, ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿ ಹಾಗೂ

ಖಜಾಂಚಿಯವರಾದ ಶ್ರೀ ದೀಪಕ್ ಶೆಟ್ಟಿ ದಂಪತಿಗಳಿಗೆ ಅಭಿನಂದನೆಗಳು.

ಭಕ್ತಾದಿಗಳಿಗೆ ಲಡ್ಡು ಪ್ರಸಾದವನ್ನು ನೀಡಿದ ಸಂಘದ ಉಪಾಧ್ಯಕ್ಷರಾದ ಶ್ರೀ ಭೋಜರಾಜ್ ಶೆಟ್ಟಿ ಕೊರ್ಗಿ ಹಾಗೂ ಮೋರ್ಟ್ಯು ಶ್ರೀ ಚಂದ್ರಶೇಖರ ಶೆಟ್ಟಿ, ಐಶ್ವರ್ಯ ಫೈನಾನ್ಸ್ ಕೋರಮಂಗಲ ಮತ್ತು ಭಜನಾ ಕಾರ್ಯಕ್ರಮಕ್ಕೆ ಪ್ರಸಾದವನ್ನು ಒದಗಿಸಿಕೊಟ್ಟ ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ ಇವರಿಗೂ ಅಭಿನಂದನೆಗಳು.

**ಕಾರ್ಯಕ್ರಮಕ್ಕೆ ದೇಣಿಗೆ ನೀಡಿದ ದಾನಿಗಳ ವಿವರ:**



1. ಶ್ರೀಮತಿ ಸುಜಯಾ ಜಯಪ್ರಸಾದ್ ಶೆಟ್ಟಿ
2. ಶ್ರೀಮತಿ ಸರ್ವಾಣಿ ಜಿ. ರೈ
3. ಡಾ। ನಿಶಾಕಾಂತ್ ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು
4. ಶ್ರೀ ಗುರುಪ್ರಸಾದ್ ಎನ್. ಹೆಗ್ಡೆ, ಕಾರ್ಯಕಾರಿ ಸಮಿತಿ ಸದಸ್ಯರು
5. ಶ್ರೀ ಸಂತೋಷ್ ಕುಮಾರ್ ಹೆಗ್ಡೆ, ಕಾರ್ಯಕಾರಿ ಸಮಿತಿ ಸದಸ್ಯರು
6. ಶ್ರೀ ದೀಪಕ್ ಶೆಟ್ಟಿ, ಖಜಾಂಚಿ
7. ಶೀಲಾ ಎಕ್ವಿಪ್‌ಮೆಂಟ್ಸ್ ಪ್ರೈ. ಲಿ.
8. ಶ್ರೀ ಮೋಹನ್ ಶೆಟ್ಟಿ (ಪೋರ್ಟ್ ಆಫ್ ಪೆವಿಲಿಯನ್ ಬಾರ್ & ರೆಸ್ಟೋರೆಂಟ್)
9. ಶ್ರೀ ರಾಜೇಶ್ ಶೆಟ್ಟಿ ಕುತ್ಯಾರು, ಕಾರ್ಯಕಾರಿ ಸಮಿತಿ ಸದಸ್ಯರು
10. ಶ್ರೀಮತಿ ದೀಪಿಕಾ ಉಮೇಶ್ ಶೆಟ್ಟಿ
11. ಶ್ರೀ ರತ್ನಾಕರ ಶೆಟ್ಟಿ
12. ಶ್ರೀ ಸುಧಾಕರ ಶೆಟ್ಟಿ ಕೂಲ್ ಕಾರ್ನರ್
13. ಶ್ರೀ ಟಿ. ಸುಬ್ರಹ್ಮಣ್ಯ ಶೆಟ್ಟಿ, ಬಿರಿಯಾನಿ ಮನೆ
14. ಶ್ರೀ ಆನಂದರಾಮ ಶೆಟ್ಟಿ, ಮಾಜಿ ಖಜಾಂಚಿ
15. ಶ್ರೀ ಉಮೇಶ್ ಕುಮಾರ್ ಶೆಟ್ಟಿ, ಸಂಚಾಲಕರು ಪ್ರಾರ್ಥನಾ ಮಂದಿರ ಸಮಿತಿ
16. ಶ್ರೀ ಸಂತೋಷ್ (ಮನೋಹರ್ ಶೆಟ್ಟಿ)
17. ಶ್ರೀಮತಿ ಅರುಣಾ ಶೆಟ್ಟಿ, ಸದಸ್ಯರು ಪ್ರಾರ್ಥನಾ ಮಂದಿರ ಸಮಿತಿ
18. ಡಾ. ವೈ ಉಮಾನಾಥ ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು
19. ಶ್ರೀಮತಿ ಲಕ್ಷ್ಮೀ ಅಭಯ ಶೆಟ್ಟಿ

ಈ ದೇವತಾ ಕಾರ್ಯಕ್ರಮಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಭಕ್ತಾದಿಗಳಿಗೂ ಪ್ರಾರ್ಥನಾ ಮಂದಿರ ಸಮಿತಿಯ ಪರವಾಗಿ ವಂದನೆಗಳು.

**ಶ್ರೀ ಉಮೇಶ್ ಕುಮಾರ್ ಶೆಟ್ಟಿ**
ಸಂಚಾಲಕರು ಪ್ರಾರ್ಥನಾ ಮಂದಿರ ಸಮಿತಿ

**ಶ್ರೀ ರಾಜೇಶ್ ಶೆಟ್ಟಿ ಕುತ್ಯಾರು**
ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ

# ತಾಯಿ



ಪ್ರಣೀತಿ ಜೆ. ಶೆಟ್ಟಿ

**ಭೂಗರ್ಭದ ನೀಲಿಯಲ್ಲಿ**
**ಉದಯಿಸಿದ ಧ್ರುವತಾರೆ**
**ಜೀವ ಸೆಲೆಗೆ ಅಮೃತ**
**ಉಣಿಸಿದ ಮನಮೋಹಿನಿ**
**ಪ್ರೀತಿ ಪ್ರೇಮದ ಅಮೃತಧಾರೆ**
**ಮಮಕಾರದ ಸಂಜೀವಿನಿ**

ಭೂಮಿತಾಯಿಯು ಜೀವಕೋಟಿಗಳಿಗೆ ಜನನಿ–ಯಾದಾಗ, ನೀನಾದೆ ಮಾನವ ಶಿಶುವಿಗೆ ಜನನಿ. ನೀನಾದೆ ಮಹಾತಾಯಿ, ನಿನ್ನಲ್ಲಿ ಅಡಕವಾಯಿತು ಆ ಭಗವಂತನ ಸ್ವರೂಪ. ಮಹಾಗೌರಿಯು ನೆಲೆಸಿದಳು ನಿನ್ನ ಹೃದಯದಲಿ. ನೋವನ್ನು ನುಂಗಿ, ದುಃಖವನ್ನು ಮರೆಮಾಚಿ, ಜನ್ಮವಿತ್ತೆ ಪುಟ್ಟ ಕಂದಮ್ಮನಿಗೆ. ಆ ಪುಟ್ಟ ಶಿಶುವನ್ನು ನೋಡುತ್ತಿದ್ದಂತೆಯೆ ಪ್ರವಹಿಸಿದಳು ಪವಿತ್ರಗಂಗೆ ನಿನ್ನ ಅಕ್ಷಿಗಳಿಂದ. ಆ ಕಣ್ಣ ಹನಿ ಪಾವನಗೊಳಿಸಿತು ನಿನ್ನ ಕಂದಮ್ಮನ. ನಿನ್ನ ನೆತ್ತರ ನೀಡಿ ಉಸಿರ ಹಂಚಿ ಒಂಭತ್ತು ತಿಂಗಳು ನಿನ್ನ ಒಡಲಲ್ಲಿ, ಮಾಂಸದ ಮುದ್ದೆಯಂತಿದ್ದ ಭ್ರೂಣಕ್ಕೆ ಜೀವ ಸ್ವರೂಪವನ್ನು ಕರುಣಿಸಿ ನಿನ್ನ ಮರುಜನ್ಮವನ್ನೇ ಪಡೆದೆಯಲ್ಲ! ನೀನೆಷ್ಟು ಸಹಿಷ್ಣು ತಾಯೇ.

ಆ ಮಗುವನ್ನು ಕಂಡಾಕ್ಷಣ ನಿನ್ನ ವೇದನೆ ಅದೃಶ್ಯವಾಯಿತು. ವಾತ್ಸಲ್ಯ ಮತ್ತು ಮಮಕಾರ ದೃಶ್ಯವಾಯಿತು. ಪ್ರೀತಿ, ಕಾರುಣ್ಯದ ಅನಂತಗಂಗೆಯು ಹರಿದಳು ನಿನ್ನ ಆಂತರ್ಯದಲ್ಲಿ. ದೇವರು ಮಾಡಿದ ಅನಂತದ ಪಥದಲ್ಲಿ ಪುಟ್ಟ ಮಗುವಿನ ರಕ್ಷಾಕವಚವು ನೀನಾದೆ. ಆ ನಿನ್ನ ಸುಕೋಮಲ ಕೈಗಳ ಸ್ಪರ್ಶ ಪಡೆದ ನಾನೇ ನಿನ್ನ ಮುದ್ದು ಕೂಸು ಎಂದು ಹೇಳಲು ನನಗೆ ಹೆಮ್ಮೆಯಿದೆ ತಾಯಿ.

ನಮ್ಮಿಬ್ಬರ ನಡುವೆ ಆದ ಒಂದು ಅವಿಸ್ಮರಣೀಯ ಘಟನೆ ನನಗೆ ನೆನಪಾಗುತ್ತಿದೆ. ಅಮ್ಮಾ ಅಂದು ನನ್ನ ಶಸ್ತ್ರಚಿಕಿತ್ಸೆ. ನೀನು ನನ್ನೊಂದಿಗೆ ಆಸ್ಪತ್ರೆಗೆ ಬಂದಿದ್ದೆ. ನನಗೆ ಧೈರ್ಯ ತುಂಬಿದೆ. ನನ್ನ ಎದುರಿಗೆ ನೀನು ಕಿಂಚಿತ್ತೂ ಬೇಸರವನ್ನು ತೋರಿಸಲಿಲ್ಲ. ಆದರೆ ನಾನು ಶಸ್ತ್ರಚಿಕಿತ್ಸಾ ಕೊಠಡಿಯೊಳಗೆ ಇದ್ದಾಗ ನೀನು ಆತಂಕದಿಂದ ಆಕ್ರಂದಿಸಿದ್ದು ನನಗೆ ತಿಳಿಯಿತಮ್ಮ. ಶಸ್ತ್ರಚಿಕಿತ್ಸೆಯ ನಂತರ ನನ್ನ ನೋವನ್ನು ಕಂಡಾಗ ನಿನ್ನ ಹೃದಯ ಚೂರಾಗಿದ್ದು, ಕರುಳು ಮಿಡಿದದ್ದು, ಆ ಭಗವಂತನನ್ನು ಬೇಡಿದ್ದು, ಎಲ್ಲವೂ ನನಗೆ ಗೋಚರವಾಯಿತಮ್ಮ. ಏಷ್ಟಾದರೂ ನಾನು ಮತ್ತು ನೀನು ಕರುಳ ಸಂಬಂಧಿಗಳಲ್ಲವೇ? ಅದಕ್ಕೂ ಮಿಗಿಲಾಗಿ ನಾವಿಬ್ಬರೂ ಆತ್ಮಸಂಬಂಧಿಗಳು. ಆ ಪರಿಸ್ಥಿತಿಯಲ್ಲಿ ನೀ ಕುಸಿಯದೆ ನನ್ನ ಬಲವಾಗಿ ನಿಂತೆಯಲ್ಲ, ನೀನು ಆದಿಶಕ್ತಿಯೇ ಸರಿ. ಬಾಳಿನಲ್ಲಿ ಅದೇನೆ ದುರ್ದೆಶೆ ಬಂದರೂ ಅದು ದುರ್ದೆಶೆ ಅಲ್ಲ.

ಜೀವಕೋಟಿಗಳ ಪ್ರತಿ ನಿತ್ಯದ ಜೀವನ ಸಂಗ್ರಾಮದಲ್ಲಿ ನನ್ನದೂ ಒಂದು ಹೋರಾಟ. ಜೀವನವೆಂಬ ಚದುರಂಗದಾಟದಲ್ಲಿ ನನ್ನದು ಅದೃಷ್ಟ ಪರೀಕ್ಷೆಯ ಒಂದು ಆಟ ಎಂದು ಜೀವನದ ನೈಜಪಾಠವನ್ನು ನಾ ನಿನ್ನಿಂದ ಕಲಿತದ್ದು. ನಿಜವಾಗಿಯೂ ಹೇಳುವುದಾದರೆ ನೀನು ನನ್ನ ಆಧ್ಯಾತ್ಮ ಗುರು, ನನ್ನ ಶಕ್ತಿಬಿಂದು, ಮಹಾಮಾಯೇ, ನನ್ನ ಸಂಜೀವಿನಿ, ನನ್ನ ಮುದ್ದು ಅಮ್ಮಾ....

ಈ ಅಮ್ಮನೆಂಬ ಅಮೃತದ ದೇವತೆಯು ಹೀಗಿರಲು ನಾನು ವಂದನೆ ಸಲ್ಲಿಸಲೇಬೇಕು. ನಿನ್ನ ಆತ್ಮವನ್ನು ನನ್ನೊಂದಿಗೆ ಸಮ್ಮಿಲನಗೊಳಿಸಿದ ಆ ಭಗವಂತನಿಗೆ ನನ್ನ ಕೋಟಿ ನಮನಗಳು.

**ಪ್ರಣೀತಿ ಜೆ. ಶೆಟ್ಟಿ**
ದ್ವಿತೀಯ ಪಿ.ಯು.ಸಿ.
ಅವಿನಹಳ್ಳಿ, ಸಾಗರ

# ಕನ್ನಡ ವೈಭವ

ಸಿರಿಗನ್ನಡ ಜಯ ಕನ್ನಡ ವಿಶಾಲ ಕರ್ನಾಟಕ ವೇದಿಕೆ
ಶಾಂತಿ ಸ್ನೇಹ ಸೌಹಾರ್ದತೆಗಳ ಸಾರುವ ಪೀಠಿಕೆ

ಕನ್ನಡದ ಹೊನ್ನುಡಿಯ ಶುಭ ತಿಲಕವಿಟ್ಟು
ನಾಡು ನುಡಿ ರಕ್ಷಣೆಯ ಸಂಕಲ್ಪ ತೊಟ್ಟು
ಬಂದಿಹೆವು ಎದೆತುಂಬ ಅಭಿಮಾನವಿಟ್ಟು

ಬಂದೇವು ಎದೆತುಂಬ ಅಭಿಮಾನವಿಟ್ಟು
ಕನ್ನಡದ ರಕ್ಷಣೆಯ ದೀಕ್ಷೆಯನು ತೊಟ್ಟು

ಗಂಡು ಮೆಟ್ಟಿನ ನೆಲದ ಹಿರಿಮೆ ನೆನಪಿಟ್ಟು
ನೆಲಜಲದ ರಕ್ಷಣೆಗೆ ನಮ್ಮ ಮುಡಿಪಿಟ್ಟು
ಕನ್ನಡದ ಸೇವೆಯಲಿ ಮುಂದಡಿಯನಿಟ್ಟು

ಬಂದೇವು ಎದೆತುಂಬ ಅಭಿಮಾನವಿಟ್ಟು
ಕನ್ನಡದ ರಕ್ಷಣೆಯ ದೀಕ್ಷೆಯನು ತೊಟ್ಟು

ಕಾವೇರಿ ಪುಣ್ಯಜಲ ಕಲಶದೊಳು ಪಿಡಿದು
ಕೃಷ್ಣೆ ಭೀಮೆಯರ ತಂಪಿನೊಳು ಮಿಂದು
ತುಂಗಭದ್ರಾ ಕಪಿಲ ಜೀವಜಲ ಸವಿದು

ನೆಲಜಲದ ರಕ್ಷಣೆಗೆ ನಮ್ಮ ಮುಡಿಪಿಟ್ಟು
ಬಂದೇವು ಎದೆತುಂಬ ಅಭಿಮಾನವಿಟ್ಟು

ನೃಪತುಂಗ ಕದಂಬ ಚಾಲುಕ್ಯ ಶೌರ್ಯ
ವಿಜಯನಗರದ ಕೃಷ್ಣದೇವರಾಯ
ಗಂಗ ಹೊಯ್ಸಳರು ಮೈಸೂರು ರಣಧೀರ

ನೆನೆದೇವು ನೆನೆದೇವು ಕನ್ನಡದ ಚರಿತೆ
ಕೋಟೆಕೊತ್ತಲ ಕಲ್ಲು ಕಲ್ಲಿನಲಿ ಕವಿತೆ

ಕನಕ ಪುರಂದರರನ್ನು ಭಕ್ತಿಯಲಿ ಸ್ಮರಿಸಿ
ಶರಣರ ವಚನಗಳ ನಿತ್ಯದಲಿ ಸ್ತುತಿಸಿ
ಪಂಪ ರನ್ನರು ಮೇರು ಕವಿಗಳಿಗೆ ನಮಿಸಿ

ನೆನೆದೇವು ಕನ್ನಡದ ಗುರುಶರಣರನ್ನು
ಜ್ಞಾನಪೀಠದ ಪ್ರೌಢ ಘನವಂತರನ್ನು

ಶಿಲೆಯೊಳಗೆ ಸಂಗೀತ ನಾಟ್ಯವೈಖರಿಯು
ಹಂಪೆ ಹಳೆಬೀಡು ಬೇಲೂರ ಸಿರಿಯು
ಮಂದಹಾಸದಿ ಮೆರೆವ ಗೊಮ್ಮಟನ ಪರಿಯು

ನೆನೆದೇವು ನೆನೆದೇವು ಕನ್ನಡದ ಚರಿತೆ
ಗಂಡೆದೆಯ ಗುಂಡಿಗೆಯ ವೀರ ರಸ ಕವಿತೆ

ಸಹ್ಯಾದ್ರಿ ಗಿರಿಸಾಲೆ ಶೃಂಗಾರ ಮಾಲೆ
ರಸಪೂರ್ಣೆ ಸಸ್ಯಶ್ಯಾಮಲೆ ನಿನ್ನಲೀಲೆ
ಜಗಮಾನ್ಯೆ ಕನ್ನಡದ ದೇವಿ ನೀಧನ್ಯೆ

ಬಂದೇವು ಎದೆತುಂಬ ಅಭಿಮಾನವಿಟ್ಟು
ಕನ್ನಡದ ಸೇವೆಯಲಿ ಮುಂದಡಿಯನಿಟ್ಟು

**– ಬಾಲಕೃಷ್ಣ ಹೆಗ್ಡೆ ಬನ್ನಾಡಿ.**

# ಯುವ ವಿಭಾಗ – ಹೊಸ ವರ್ಷಾಚರಣೆ

ದಿನಾಂಕ 31.12.2018 ರಂದು ಸೋಮವಾರ ಸಂಜೆ 7.30 ರಿಂದ ಬಂಟರ ಸಂಘ ಬೆಂಗಳೂರು ಯುವ ವಿಭಾಗದಿಂದ "ನಮ್ಮ ನೆಲದಲ್ಲಿ ನಮ್ಮವರು" ಎನ್ನುವ ಶೀರ್ಷಿಕೆಯಡಿ ಸಂಘದ ಆವರಣದಲ್ಲಿ ಹೊಸ ವರ್ಷಾಚರಣೆಯನ್ನು ಆಯೋಜಿಸಿತ್ತು.

ಕಾರ್ಯಕ್ರಮದಲ್ಲಿ ಮನೋರಂಜನೆಗಾಗಿ ವಿವಿಧ ಬಗೆಯ ಆಟೋಟ ಸ್ಪರ್ಧೆಗಳು, ಫ್ಯಾಷನ್ ಶೋ, ಸಮೂಹ ನೃತ್ಯ, ಡಿಜೆಗಳನ್ನು ಏರ್ಪಡಿಸಿದ್ದು ಸಂಘದ ಸದಸ್ಯರು ಪರಸ್ಪರ ಬೆರೆತು ಸಂತೋಷ ಪಟ್ಟರು.

ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿ, ಉಪಾಧ್ಯಕ್ಷರಾದ ಶ್ರೀ ಭೋಜರಾಜ್ ಶೆಟ್ಟಿ ಕೊರ್ಗಿ, ಗೌರವ ಕಾರ್ಯದರ್ಶಿಯವರಾದ ಶ್ರೀ ಮಧುಕರ ಎಂ. ಶೆಟ್ಟಿ, ಜೊತೆ ಕಾರ್ಯದರ್ಶಿಯವರಾದ ಶ್ರೀ ಸೌಮ್ಯಪ್ರಿಯ ಹೆಗ್ಡೆ, ಖಜಾಂಚಿಯವರಾದ ಶ್ರೀ ದೀಪಕ್ ಶೆಟ್ಟಿಯವರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಕುಟುಂಬ ಸಮೇತರಾಗಿ ಪಾಲ್ಗೊಂಡರು.

ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಕಾರ್ಯಕ್ರಮಕ್ಕೆ ವಿಶೇಷ ಪ್ರೋತ್ಸಾಹ ನೀಡಿದ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಮಾಜಿ ಅಧ್ಯಕ್ಷರುಗಳು ಮತ್ತು ಪದಾಧಿಕಾರಿಗಳು ಹಾಗೂ ಸದಸ್ಯರೆಲ್ಲರಿಗೂ ಹೃದಯಪೂರ್ವಕ ಕೃತಜ್ಞತೆಗಳು.




ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ಯುವ ವಿಭಾಗದ ಸಂಚಾಲಕರಾದ ಶ್ರೀ ಅಜಿತ್ ಶೆಟ್ಟಿ ಮತ್ತು ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಕಾರ್ಯಕ್ರಮದ ಪ್ರಚಾರದಲ್ಲಿ ಸಹಕರಿಸಿದ ಕಿರುತೆರೆ, ಹಿರಿತೆರೆ ಮತ್ತು ರಂಗಭೂಮಿಯ ದಿಗ್ಗಜ್ಜರೆಲ್ಲರಿಗೂ ಯುವ ವಿಭಾಗವು ಸದಾ ಆಭಾರಿಯಾಗಿರುತ್ತದೆ. ಕಾರ್ಯಕ್ರಮ ತಡರಾತ್ರಿಯವರೆಗೂ ನಡೆದಿದ್ದು, ಸುತ್ತ ಮುತ್ತಲಿನ ನಿವಾಸಿಗಳ ಸಹಕಾರದಿಂದ ಯಶಸ್ವಿಯಾಗಿ ನೆರವೇರಿತು.

– ವರದಿ: **ಡಾ। ವೈ. ಉಮಾನಾಥ ಶೆಟ್ಟಿ**
ಚೇರ್‌ಪರ್ಸನ್, ಯುವ ವಿಭಾಗ

## ಬಂಟರ ಸಂಘ ಬೆಂಗಳೂರು

### ರಂಗ ತರಬೇತಿ ಮತ್ತು ಯಕ್ಷಗಾನ ಸಮಿತಿ

**ವಿಶೇಷ ಸೂಚನೆ:–**

ತಾರೀಕು 14.01.2019ರಂದು ನಿಗದಿಯಾಗಿದ್ದ "ಯಕ್ಷ ಸಂಕ್ರಮಣ" ಯಕ್ಷಗಾನ ಕಾರ್ಯಕ್ರಮವನ್ನು ಕಾರಣಾಂತರಗಳಿಂದ ಮುಂದೂಡಲಾಗಿತ್ತು. ಆ ಪ್ರಯುಕ್ತ ತಾರೀಕು 31.03.2019ರ ಭಾನುವಾರದಂದು ಪೂರ್ವಾಹ್ನ 11.00ಗಂಟೆಗೆ ಸರಿಯಾಗಿ ಬಂಟರ ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ವಿಶೇಷ ಯಕ್ಷಗಾನ ಕಾರ್ಯಕ್ರಮವು ಜರಗಲಿದ್ದು, ಕಲಾಭಿಮಾನಿಗಳೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಪ್ರೋತ್ಸಾಹಿಸಬೇಕಾಗಿ ಕಳಕಳಿಯ ವಿನಂತಿ.

ಕಾರ್ಯಕ್ರಮದ ಹೆಚ್ಚಿನ ವಿವರಗಳಿಗಾಗಿ ಸ್ನೇಹ ಚಿಂತನೆಯ ಮುಂದಿನ ಸಂಚಿಕೆಯನ್ನು ನಿರೀಕ್ಷಿಸಿ.

**– ರಂಗ ತರಬೇತಿ ಮತ್ತು ಯಕ್ಷಗಾನ ಸಮಿತಿ**

ಸಣ್ಣಕಥೆ

# ಶಾಪ



ಸತೀಶ ಶೆಟ್ಟಿ ವಕ್ವಾಡಿ

ಸೂರ್ಯನೆತ್ತಿ ಸುಡುತ್ತಿದ್ದ. ಮದ್ಯಾಹ್ನದ ಸುಡುಬಿಸಿಲಿನ ತಾಪಕ್ಕೆ ಹಣೆಯ ಮೇಲೆ ಹನಿಯುಕ್ಕುತ್ತಿರುವ ಬೆವರನ್ನು ಒರೆಸುವುದರಲ್ಲೇ ಪ್ರತಾಪ ಸುಸ್ತಾಗಿದ್ದ. ಆರಂಭದಲ್ಲಿ ಬಿರುಸಾಗಿದ್ದ ಆತನ ಹೆಜ್ಜೆಗಳಿಗೆ ಈಗ ವಿಪರೀತ ಸುಸ್ತು. ಆಗಲೇ ಗಂಟೆ ಎರಡಾಗಿತ್ತು, ಇಂದು ಭಾನುವಾರವಾಗಿದ್ದರಿಂದ ಜನರ ಓಡಾಟ ವಿರಳವಿರುವುದರಿಂದ ಮಧ್ಯಾಹ್ನ ದೇವಸ್ಥಾನ ಬೆಟ್ಟಿಗೆ ಬರಬೇಕಾಗಿದ್ದ ಒಂದು ಘಂಟೆಯ ನವಯುಗ ಬಸ್ಸಿನ ಟ್ರಿಪ್ ಕ್ಯಾನ್ಸಲ್ ಆಗಿತ್ತು. ಅದರ ಪರಿಣಾಮ ರಾಜಾರಾಮಭಟ್ರ ಮನೆಯ ಶ್ರಾದ್ಧಕ್ಕೆ ಹೊರಟಿದ್ದ ರಾಮ, ಮಗನ ಜೊತೆ ನಡೆದುಕೊಂಡೆ ಬರುವಂತಾಯಿತು.

"ಅಪ್ಪ ಕಾಲು ನೊಯ್ತಾ ಇದೆ, ಇನ್ನು ಎಷ್ಟು ದೂರ ಇದೆ ಭಟ್ರಮನೆ " ಸುಸ್ತಾದ ಪ್ರತಾಪ ತಂದೆಯಲ್ಲಿ ಕೇಳಿದ.

"ಆಗೋ ಅಲ್ಲಿ ದೇವಸ್ಥಾನ ಕಾಂತಿತ್ತಲ್ಲ, ಅದ್ರ ಹಿಂದೆ ಇದೆ, ಬೇಗ್ಬೇಗ ನಡಿ. ಆಮೇಲೆ ಲೇಟ್ ಆದ್ರೆ ಉಂಬುಕ್ ಎಲ್ಲ ಐಟಂ ಇಪ್ಪುದಿಲ್ಲ "ರಾಮ ಮಗನನ್ನು ವೇಗವಾಗಿ ನಡೆಯುವಂತೆ ಹುರಿದುಂಬಿಸಿದ.

ಇವತ್ತು ರಾಜಾರಾಮಭಟ್ರ ತಂದೆಯ ಶ್ರಾದ್ಧ. ಮೂರು ದಿನದ ಹಿಂದೆ ಪೇಟೆಯಲ್ಲಿ ಸಿಕ್ಕಿದ ಭಟ್ರು ರಾಮನನ್ನು ಶ್ರಾದ್ಧದ ಊಟಕ್ಕೆ ಆಹ್ವಾನಿಸಿದ್ದರು. ಎಂದೂ ಭಟ್ರ ಮನೆ ಊಟವನ್ನು ಮಿಸ್ ಮಾಡದ ರಾಮ ಇಂದು ಬೆಳಿಗ್ಗೆನೇ ನಾಲ್ಕು ಮನೆಯ ತೆಂಗಿನಕಾಯಿ ತೆಗೆಯೋ ಕೆಲಸ ಮುಗಿಸಿ ಭಟ್ರ ಮನೆಯತ್ತ ಹೊರಟಿದ್ದ. ಭಾನುವಾರವಾಗಿದ್ದರಿಂದ ಮನೆಯಲ್ಲೇ ಇದ್ದ ಮಗ ಪ್ರತಾಪನನ್ನು ಜೊತೆಗೆ ಕರೆದುಕೊಂಡಿದ್ದ.

"ಯಾಕೋ ರಾಮ ಲೇಟ್ಮಾಡ್ದಿ, ನಮ್ ಊಟ ಎಲ್ಲಾ ಆಯ್ತ್ ಮಾರಾಯ, ಏ ಸುನಂದಾ, ರಾಮ ಬಂದ ಕಾಣ್, ಊಟ ಹಾಕ್" ಊಟ ಮಾಡಿ ಕೈತೊಳೆಯಲು ಅಂಗಳಕ್ಕೆ ಬಂದ ರಾಜಾರಾಮಭಟ್ರು ರಾಮನನ್ನು ನೋಡಿದಾಕ್ಷಣ ಹೆಂಡತಿಗೆ ಕೂಗಿ ಹೇಳಿದ್ರು.

"ರಾಮ, ಹೆಚ್ಚಿಗೆ ಎಂತ ಉಳ್ದಿಲ್ಲ ಮಾರಾಯ, ಇವತ್ತು ಭಾನುವಾರ ಅಲ್ದಾನಾ, ಅಂದ್ಕಂಡಿದ್ದಕ್ಕಿಂತ ಜಾಸ್ತಿ ಜನ ಐರಾ, ಸ್ವಲ್ಪಹುಳಿ, ಪ್ಯಾಸ, ಪಲ್ಯ ಇದೆಕಾಣ, ಸ್ವಲ್ಪ ಸುಧಾರಿಸ್ಕಂಡ್ ಉಣಿ" ಮೂರ್ನಾಲ್ಕು ಪಾತ್ರೆಯಲ್ಲಿ ತಂದಿಟ್ಟ ಊಟವನ್ನು ಬಾಳೆಎಲೆಗೆ ಹಾಕುತ್ತ ಸುನಂದಮ್ಮ ಹೇಳಿದ ಮಾತು ಕೇಳಿದ ರಾಮನಿಗೆ ನಿರಾಸೆ ಆಗಿತ್ತು. "ಛೆ, ದರಿದ್ರ ಬಸ್ಸಿನಿಂದ ತಡವಾಗಿ ಒಳ್ಳೆ ಊಟ ತಪ್ಪಿತಲ್ಲ" ಅಂತ ಮನದಲ್ಲೇ ನೊಂದುಕೊಂಡ. ಪ್ರತಾಪ ಮಾತ್ರ ಯಾವುದನ್ನು ಲೆಕ್ಕಿಸದೆ ಊಟದ ಎಲೆಗೆ ಹಾಕಿದ್ದನ್ನು ಖಾಲಿ ಮಾಡುವುದರಲ್ಲೇ ನಿರತನಾಗಿದ್ದ.

"ರಾಮ ಕೊಟ್ಟಿಗೆಯಲ್ಲಿ ಊಟ ಮಾಡಿದ ಎಲೆಗಳನ್ನು ಇಟ್ಟಿದ್ದೇನೆ. ನಿನ್ ಊಟ ಆದ್ಮೇಲೆ ಅದ್ರಲ್ಲಿ ಬೇಕಾದುದ್ದನ್ನು ಎತ್ಕಂಡು ಆಮೇಲೆ ಎಲೆಗಳನ್ನು ಗೊಬ್ರದ ರಾಶಿಗೆ ಹಾಕ್ಅಕಾ "ಊಟ ಮಾಡುತ್ತಿದ್ದ ರಾಮನಿಗೆ ಹೇಳಿ ಸುನಂದಮ್ಮ ಒಳ ನಡೆದರು.

"ಅದೇನ್ಜನನೋ, ಊಟಕ್ಕೆ ಬಂದ ಸುಮಾರು ಜನ್ರಿಗೆ ಸಕ್ರೆ ಕಾಯಿಲೆ ಅಂತೇ, ಕೆಲವ್ಲಾಡು ಜಿಲೇಬಿನ ಮುಟ್ಟಲೇ ಇಲ್ಲ, ಊಟದ ಎಲೆಯಲ್ಲಿ ಹಂಗೆ ಇದೆ. ಅದನ್ನೆಲ್ಲ ವೇಸ್ಟ್ಮಾಡ್ಬೇಡ. ಎಲ್ಲಾಎತ್ಕೊ, ಪಾಪನಿನ್ಮಗ, ಮಗ್ಳು ಮತ್ತು ಹೆಂಡ್ತಿ ತಿನ್ಲಿ" ಕೈ ತೊಳೆದುಕೊಂಡು ಬಂದ ರಾಜಾರಾಮ ಭಟ್ರು ಅಂದಾಗ ರಾಮ ಮತ್ತು ಪ್ರತಾಪನ ಮುಖದಲ್ಲಿ ಸಾವಿರ ವ್ಯಾಟ್ಬಲ್ಬಿನ ಬೆಳಕಿನಷ್ಟು ಪ್ರಖರತೆ.

ಊಟ ಮುಗಿಸಿದ ರಾಮ, ಭಟ್ರು ಕೊಟ್ಟ ಪ್ಲಾಸ್ಟಿಕ್ಚೀಲದಲ್ಲಿ ಎಂಜಲು ಎಲೆಯಲ್ಲಿ ಉಳಿದ ಲಾಡು, ಜಿಲೇಬಿಗಳನ್ನೂ ಆಯ್ದುಕೊಳ್ಳಲು ಶುರುಮಾಡಿದ.

"ರಾಮಾ, ನಾಳೆನಾಡ್ದು ಸ್ವಲ್ಪ ಈ ಕಡೆ ಬಂದು ಆ ಕೆರೆಬದಿಯಲ್ಲಿ ಇದ್ದ್ ತೆಂಗಿನ ಮರದ್ಕಾಯಿ ತೆಗದ್ಹೋಗ್ ಅಕಾ" ಅಂದ ರಾಜಾರಾಮ ಭಟ್ರು ಅಂಗಿ ಕಿಸೆಯಿಂದ ಐವತ್ತರ ನೋಟನ್ನು ರಾಮನ ಕೈಗಿಡುತ್ತ "ಇದ್ನಿಂಗ್ಸಾರಾಯಿ

ಕುಡುಕ್ ಅಲ್ಲ. ನಿನ್ನಂಡಿಗೆ ಶಾಲಿಚೀಲಾನೊ, ಪುಸ್ತಕನೂ ತಕ್ಸಿಕೊಡು. ಅಪರೂಪಕ್ಕೆ ಗಂಡಿನ್ನಕರೆದ್ಕೊಂಡು ಬಂದಿದ್ಯ, ಮಕ್ಳನ್ನು ಬರಿಕೈಲಿ ಕಳ್ಸಾಬ್ದುರ್ದ ಆಯ್ತಾ" ಅಂದಿದ್ದಕ್ಕೆ ತಲೆಯಾಡಿಸಿದ ಆತ, ಎಂಜಲು ಎಲೆಯಿಂದ ಎತ್ತಿದ್ದ ಲಾಡು, ಜಿಲೇಬಿ ಪ್ಯಾಕನ್ನು ಮಗನ ಕೈಗೆ ನೀಡಿ, ಎಂಜಲು ಎಲೆಯ ಹೆಡಿಗೆಯನು ಹೊತ್ತುಕೊಂಡು ಗೊಬ್ಬರದ ಗುಂಡಿಯತ್ತ ನಡೆದ.

"ಅಪ್ಪ ಅಪ್ಪ, ಇಲ್ಲೇ ಒಂದು ಲಾಡು ಮತ್ತು ಜಿಲೇಬಿ ತಿಂಬುದಾ. ಮನೆಗೆ ಹೋದ್ಮೇಲೆ ಅಮ್ಮ ಜಾಸ್ತಿ ಕೊಡೋಲ್ಲ" ಹಿಂತಿರುಗಿ ಮನೆಯ ಹಾದಿ ಹಿಡಿದ ರಾಮನಲ್ಲಿ ಪ್ರತಾಪ ಬೇಡಿಕೊಂಡ. ರಾಮ ತಿನ್ನು ಅಂತ ತಲೆಯಾಡಿಸುವ ಹೊತ್ತಿಗೆ ಪ್ರತಾಪ ಒಂದು ಲಾಡಿಗೆ ಮೋಕ್ಷ ಕೊಟ್ಟಾಗಿತ್ತು.

"ಅಪ್ಪ ನೀನು ಯಾವಾಗ್ಲೂ ಹೇಳ್ತಿದ್ದಿಯ್ಯಲ, ಊಟನಾ ಚೆಲ್ಲಬಾರದು, ದೇವರು ಶಾಪಕೊಡ್ತಾನೆ ಅಂತ. ಆದ್ರೆ ಇಲ್ಲಿ ನೋಡು ಇಷ್ಟು ದೊಡ್ಡ ದೊಡ್ಡ ಮನುಷ್ಯರು ಎಷ್ಟೆಲ್ಲ ಚೆಲ್ಲಿ ಬಿಟ್ಟಿದ್ದಾರೆ. ಅವರಿಗ್ಯಾಕೆ ದೇವರು ಶಾಪ ಕೊಡೋಲ್ಲ" ಜಿಲೇಬಿ ತಿನ್ನುತ್ತಾ ಮಗ ಕೇಳಿದ ಪ್ರಶ್ನೆಗೆ ರಾಮ ಕಕ್ಕಾ ಬಿಕ್ಕಿಯಾದ "ಅವರೆಲ್ಲ ದೇವರಿಗೆ ಪೂಜೆ ಮಾಡುವರು, ಅವರಿಗೆ ಶಾಪ ಕೊಟ್ಟರೆ ಆಮೇಲೆ ದೇವರಿಗೆ ಪೂಜೆ ಮಾಡುವವರ್ಯಾರು, ಅದಕ್ಕೆ ದೇವರು ಅವರಿಗೆ ಶಾಪ ಕೊಡೋಲ್ಲ." ರಾಮನ ಉತ್ತರ ಪ್ರತಾಪನಿಗೆ ಅರ್ಥವಾಗಲಿಲ್ಲ, ಆದರೆ ಅವರು ಚೆಲ್ಲಿದರಿಂದಲೇ ಇಂದು ತನಗೆ ಲಾಡು ಜಿಲೇಬಿ ಸಿಕ್ಕಿದ್ದು ಅನ್ನೋದು ಮಾತ್ರ ನಿಜ ಅನ್ನಿಸಿತ್ತು.

****

"ಏಯ್... ಪ್ರತಾಪ, ಆಡೂಕೆ ಬಾರೋ, ಅಲ್ಲಿಗೊಯ್ಮರದ್ ಅಡಿಕೂಕಂಡ್ ಎಂತ ಮಾಡ್ತ್ಯ" ನವೀನ ಧ್ವನಿ ಕೇಳಿ, ಶಾಲೆಯಲ್ಲಿ ಆಟದ ಪಿರಿಯಡ್ನಲ್ಲಿ ಆಡೋದು ಬಿಟ್ಟು, ಶಾಲೆ ಹಿಂದಿನ ಗೊಯ್ಮರದ ಕೆಳಗೆ ಅಮ್ಮನಿಗೆ ಕಾಣದ ಹಾಗೆ ಶಾಲಿ ಚೀಲಕ್ಕೆ ಹಾಕಿಕೊಂಡು ಬಂದಿದ್ದ ಲಾಡು ಮತ್ತು ಜಿಲೇಬಿ ತಿನ್ನಲು ಆರಂಭಿಸುತ್ತಿದ್ದ ಪ್ರತಾಪ ಬೆಚ್ಚಿ ಬಿದ್ದ. ಆತ ಸವಾರಿಸಿಕೊಳ್ಳುವುದರ ಒಳಗೆ ಮಿಂಚಿನ ವೇಗದಲ್ಲಿ ಬಂದ ನವೀನ, ಲಾಡು ಮತ್ತು ಜಿಲೇಬಿಯನ್ನು ನೋಡಿ ನನಗೂ ಸ್ವಲ್ಪ ಕೊಡೊ ಅಂತ ಕೇಳಿಕೊಂಡ.

"ಏಯ್.... ನವೀನ, ಅದು ನಮ್ಮಪ್ಪಂಗೆ ಯಾರದ್ದೋ ಮನೆಯಲ್ಲಿ ಕೊಟ್ಟಿದ್ದು, ನಿನ್ ಅದನ್ನೆಲ್ಲ ತಿನ್ನಬಾರದು, ತಪ್ಪಾಗುತ್ತೆ, ಬೇಡಕಣೋ, ನೆಡಿ ಆಟ ಆಡೋಣ" ಅಂತ ನವೀನನನ್ನು ಸಾಗಹಾಕಲು ಮಾಡಿದ ಪ್ರತಾಪನ ಯತ್ನ ವಿಫಲವಾಗಿತ್ತು. ನವೀನ ಹಿಂದೆ ಮುಂದೆ ನೋಡದೆ ಪ್ರತಾಪನ ಶಾಲಿ ಚೀಲಕ್ಕೆ ಕೈಹಾಕಿ ಒಂದು ಲಾಡು ಮತ್ತು ಜಿಲೇಬಿಯನ್ನು ಎತ್ತಿಕೊಂಡು ತಿನ್ನಲಾರಂಭಿಸಿಬಿಟ್ಟ.

"ನಿನ್ನೆ ನಮ್ಮ ಪೈಕಿ ರಾಜಾರಾಮಭಟ್ರ ಮನೆಯಲ್ಲಿ ಶ್ರಾದ್ಧ ಇತ್ತು, ಅಪ್ಪ ಹೋಗಿದ್ರು, ನನ್ನ ಕರ್ಕೊಂಡು ಹೋಗಿ ಅಂದ್ರೆ ಬೈದ್ರು, ಬರ್ತಾ ಅಲ್ಲಿ ಕೊಡೊ ಸ್ವೀಟ್ ತನ್ನಿ ಅಂದ್ರು ತಂದಿರಲಿಲ್ಲ. ಎಷ್ಟು ಬೇಜಾರಾಗಿತ್ತು ಗೊತ್ತ ಪ್ರತಾಪ!. ನಿನಗ್ನೋಡು ಎಂತ ಚಾನ್ಸ್, ನಿನ್ನಪ್ಪ ಪೇಟೆಗೆ ಹೋದಾಗೆಲ್ಲ ಸ್ವೀಟ್ತರ್ತಾರೆ, ನನ್ನಪ್ಪ ಇದ್ದಾನೆ ಕಂಜೂಸ್" ಆಸೆ ಕಣ್ಣುಗಳಿಂದ ನೀರು ಹನಿಯುಕ್ಕುತ್ತಿರುವ ಬಾಯಿಗೆ ಲಾಡು ತುರುಕಿಸಿಕೊಳ್ಳುತ್ತ ನವೀನ ನುಡಿದಾಗ ಪೆದ್ದ ನಗು ನಕ್ಕ ಪ್ರತಾಪ.

"ಏಯ್, ಅದ್ಮಣ್ಣ್ ಆಯಿತ್, ತಿನ್ಬೇಡ, ಬೇರೆ ಕೊಡ್ತೇನಿ ಇರು" ಲಾಡನ್ನು ಮುಗಿಸಿ ಜಿಲೇಬಿಯನ್ನು ತಿನ್ನುವ ಭರದಲ್ಲಿ ಕೈ ಜಾರಿಸಿ ನೆಲಕ್ಕೆ ಕೆಡವಿಕೊಂಡು, ಮತ್ತೆ ಅದನ್ನು ತನ್ನ ಚೆಡ್ಡಿಗೆ ಒರಿಸಿಕೊಂಡು ತಿನ್ನಲು ಆರಂಭಿಸಿದ ನವೀನನನ್ನು ಪ್ರತಾಪ ತಡೆದ "ಇಲ್ಲ ಕಣೋ, ತಿನ್ನೋದನ್ನು ಚೆಲ್ಲಬಾರದು, ದೇವರು ಶಾಪ ಹಾಕ್ತಾನೆ. ಆಮೇಲೆ ನಮಗೆ ತಿನ್ನೋದಕ್ಕೆ ಏನು ಕೊಡೋಲ್ಲ ದೇವರು, ಗೊತ್ತಾ ನಿನಗೆ" ನವೀನನ ಮಾತಿಗೆ ಪ್ರತಾಪ ಜೋರಾಗಿನಕ್ಕ

"ಬೆಪ್ಪ ನೀನು, ನಿಮಗ್ಯಾಕೆ ದೇವರು ಶಾಪ ಹಾಕ್ತಾನೆ,? ನೀವು ದೇವರಿಗೆ ಪೂಜೆ ಮಾಡೋರು. ಶಾಪ ಏನಿದ್ದರೂ ನಮಗೆ ಮಾತ್ರ. ಸರಿ ತಗೋ ಇನ್ನೊಂದು ಜಿಲೇಬಿ ತಿನ್ನು" ಅಂತ ನವೀನನ ಕೈಗೆ ಮತ್ತೊಂದು ಜಿಲೇಬಿ ನೀಡಿದ ಪ್ರತಾಪ, ಎಲ್ಲಿಂದಲೋ ಸೂರ್ಯನ ಬೆಳಕು ಕನ್ನಡಿಯ ಪ್ರತಿಫಲನದಿಂದ ಕಣ್ಣು ಕುಕ್ಕಿದಂತಾಗಿ ಶಾಲೆಯ ಕಾಂಪೌಂಡ್ಕಡೆ ನೋಡಿದ. ಅಲ್ಲಿ ಯಾರೋ ಎಸೆದು ಹೋಗಿದ್ದ ದೇವರ ಫೋಟೋದ ಅರ್ಧ ಒಡೆದ ಗ್ಲಾಸು ಸೂರ್ಯನ ಬೆಳಕಿಗೆ ಪ್ರಜ್ವಲಿಸುತ್ತಿತ್ತು...

# ಬಂಟರ ಸಂಘ ಬೆಂಗಳೂರು

## ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆ

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆಗಳು ಈ ಬಾರಿ ಅತ್ಯಂತ ಯಶಸ್ವಿಯಾಗಿ ನೆರವೇರಿತು.

ದಿನಾಂಕ 29.12.2018ರಂದು ಮಧ್ಯಾಹ್ನ 2 ಗಂಟೆಯಿಂದ ಚಿತ್ರಕಲೆ, ರಂಗೋಲಿ ಹಾಗೂ ನಗೆ ಪ್ರಹಸನ ಸ್ಪರ್ಧೆಗಳು ನಡೆದವು.

ದಿನಾಂಕ 30.12.2018ರಂದು ಛದ್ಮವೇಷ, ಆಶುಭಾಷಣ, ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಸಿನಿಮಾ ಸಂಗೀತ ಮತ್ತು ಸಮೂಹ ಗಾನದ ಸ್ಪರ್ಧೆಗಳು ನಡೆದು ದಿನಾಂತ್ಯದಲ್ಲಿ ಅಂತ್ಯಾಕ್ಷರಿ ಸ್ಪರ್ಧೆಯು ನೆರವೇರಿತು. ದಿನಾಂಕ 06.01.2019ರಂದು ಯಕ್ಷಗಾನ ನೃತ್ಯ, ಶಾಸ್ತ್ರೀಯ ನೃತ್ಯ, ಜಾನಪದ ನೃತ್ಯ, ಸಿನಿಮಾ ನೃತ್ಯ ಸ್ಪರ್ಧೆಗಳು ನಡೆದವು.

ಈ ಎಲ್ಲಾ ಸ್ಪರ್ಧೆಗಳು ವಿವಿಧ ವಿಭಾಗಗಳಲ್ಲಿ ನಡೆದು ಎಲ್ಲಾ ವಯೋಮಾನದವರು ಅತ್ಯಂತ ಉತ್ಸಾಹದಿಂದ ಭಾಗವಹಿಸಿದರು. ಭಾಗವಹಿಸಿದ ಎಲ್ಲಾ ಸ್ಪರ್ಧಿಗಳಿಗೂ ಪ್ರಮಾಣ ಪತ್ರವನ್ನು ನೀಡಲಾಯಿತು. ಈ ಎಲ್ಲಾ ಸ್ಪರ್ಧೆಗಳ ಬಹುಮಾನ ವಿತರಣೆಯನ್ನು ದಿನಾಂಕ 20.01.2019 ಭಾನುವಾರದಂದು ಯಲಚಗುಪ್ಪೆಯಲ್ಲಿ ನಡೆದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ ಹಾಗೂ ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ-II ಇದರ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ವಿತರಿಸಲಾಯಿತು.

ಸಾಂಸ್ಕೃತಿಕ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ ಇವರು ಪ್ರಾಸ್ತಾವಿಕ ನುಡಿಗಳನ್ನಾಡಿ ಸ್ಪರ್ಧೆಯ ವಿವರಗಳನ್ನು ನೀಡಿದರು. ವಿಜೇತರೆಲ್ಲರಿಗೂ ಟ್ರೋಫಿ, ನಗದು ಬಹುಮಾನ ಹಾಗೂ ಪ್ರಮಾಣ ಪತ್ರವನ್ನು ನೀಡಲಾಯಿತು.

ಬಹುಮಾನ ವಿತರಣೆಯನ್ನು ಮುಂಬಯಿ ಬಂಟರ ಸಂಘದ ಮಾಜಿ ಅಧ್ಯಕ್ಷರಾದ ಸಿ.ಎ. ಶಂಕರ್ ಬಿ. ಶೆಟ್ಟಿ ಹಾಗೂ ಎಂ.ಆರ್.ಜಿ ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಶ್ರೀ ಕೆ. ಪ್ರಕಾಶ್ ಶೆಟ್ಟಿ ಅವರು ನೆರವೇರಿಸಿದರು. ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿ, ಉಪಾಧ್ಯಕ್ಷರುಗಳಾದ ಶ್ರೀ ಕೆ. ಭೋಜರಾಜ್ ಶೆಟ್ಟಿ ಮತ್ತು ಶ್ರೀಮತಿ ಅಮೃತ ಎಸ್. ಶೆಟ್ಟಿ, ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿ, ಜೊತೆ ಕಾರ್ಯದರ್ಶಿ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ, ಖಜಾಂಚಿ ಶ್ರೀ ದೀಪಕ್ ಶೆಟ್ಟಿಯವರು ಉಪಸ್ಥಿತರಿದ್ದರು.

ಕೊನೆಯಲ್ಲಿ ಆಹ್ವಾನಿತ ತಂಡದ ಜೊತೆ ಸಂಘದ ಸದಸ್ಯರು ಹಾಗೂ ಮಕ್ಕಳು ಸೇರಿ ಅದ್ಭುತ ಮನೋರಂಜನಾ ಕಾರ್ಯಕ್ರಮವನ್ನು ನೀಡಿದರು. ಸಂತೋಷ್ ಹೆಗ್ಡೆ ಮತ್ತು ತಂಡದಿಂದ 'ಸಂಗೀತ ರಸಮಂಜರಿ' ಕಾರ್ಯಕ್ರಮವು ನೆರವೇರಿತು.

ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಎಲ್ಲರಿಗೂ ಹೃತ್ಪೂರ್ವಕ ವಂದನೆಗಳು.

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಚೇರ್ಮನ್, ಸಾಂಸ್ಕೃತಿಕ ಸಮಿತಿ

**ವಿ.ಸೂ. : ಬಹುಮಾನವನ್ನು ಪಡೆಯದಿರುವ ವಿಜೇತರು ಸಂಘದ ಕಛೇರಿಯನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದು.**
**ದೂರವಾಣಿ : 080–23399323, 23399636**

## Radhabhai Thimmappa Bhandary Memorial Annual Cultural Competition Winners

**Drawing - Below 6 Years**

| | |
|---|---|
| Siddi. P. Shetty | A+ |
| Vruddi . P. Shetty | A+ |
| Samruddhi. S. Shetty | A |
| Dishani.V. Shetty | A |
| Akshay. S. Shetty | B+ |
| Suhan. D. Shetty | B+ |
| Sanvi. S. Shetty | B |
| Shanvith Shetty | B |
| Geethal Shetty | B |
| Sanjith Shetty | B |
| Stuti. P. Shetty | B |
| Gaman. R. Shetty | B |

**Drawing - 6 to 10 Years**

| | |
|---|---|
| Sanvi. S. Shetty | A+ |
| Swarith.S. Shetty | A+ |
| Niha N. Shetty | A+ |
| Thanvi S. Shetty | A |
| Yatharth Shetty | A |
| Sanvi N.Shetty | A |
| Shreema A. Shetty | B+ |
| Saurvai Shetty | B+ |
| Jagarathi Naik | B+ |
| Simona P. Shetty | B+ |
| Brahmi R. Shetty | B+ |
| Saisha Rai | B+ |
| Tanav C. Shetty | B+ |
| Sanvi Shetty | B+ |
| Sunidhi Shetty | B |
| Adithi R. Shetty | B |
| Saathyak D. Shetty | B |
| Aarush Shetty | B |

**Drawing - 10 to 16 Years**

| | |
|---|---|
| Madhushree Shetty | 1st |
| Samarth Shetty | 1st |
| Samrudhi Shetty | 1st |
| Punarva Shetty | 2nd |
| Dhruv D. Shetty | 2nd |
| Adithi Shetty | 2nd |
| Ashish A. Shetty | 3rd |
| Sanik D. Shetty | Consolation |
| Sukhi S. Shetty | Consolation |
| Sushanth S. Shetty | Consolation |
| Trupti Shetty | Consolation |
| Krishna N. Shetty | Consolation |

**Drawing -Above 16 years**

| | |
|---|---|
| Suneha Bhandary | 1st |
| Akshatha P. Shetty | 2nd |

**Rangoli - Below 20 Years**

| | |
|---|---|
| Likitha R. Shetty | 1st |
| Trupti Shetty | 2nd |
| Avishi S. Shetty | 3rd |

**Rangoli - Above 20 Years**

| | |
|---|---|
| Tharanga Shetty | 1st |
| Vijayalaxmi S. Shetty | 2nd |
| Asha J. Shetty | 3rd |
| Akshatha P. Shetty | 3rd |

**Skit Competition - Group**

| | |
|---|---|
| Shamatha S. Shetty | 1st |
| Shabari N Shetty | |
| Siri S Shetty | |
| Mamatha Shetty | |
| Sangeeta N Shetty | |
| Krishna N Shetty | |

**Fancy Dress - Below 6 Years**

| | |
|---|---|
| Geethal Shetty | A+ |
| Anushka Shetty | A+ |
| Stuti P. Shetty | A+ |
| Gaman R. Shetty | A+ |
| Sanjitha Shetty | A |
| Prathi Shetty | A |
| Shanvith Shetty | B+ |
| Vishruth | B+ |
| Vikas | B |
| Tanish | B |
| Manvit P Shetty | B |

**Fancy Dress - 6 to 10 years**

| | |
|---|---|
| Sauravi Shetty | A+ |
| Nishka N. Shetty | A+ |
| Sanvi N. Shetty | A+ |
| Rachith R. Shetty | A |
| Aaradhya K. Shetty | A |
| Sumedh J. Shetty | B+ |
| Tanav C. Shetty | B+ |

**Fancy Dress -10 to 16 years**

| | |
|---|---|
| Sujal Shetty | 1st |
| Sukhi S. Shetty | 2nd |

**Fancy Dress - Above 16 Years**

| | |
|---|---|
| Sujatha Alva | 1St |

**Pick & Speak - 6 to 10 Years**

| | |
|---|---|
| Adithi R. Shetty | A+ |
| Sathyak D. Shetty | A+ |
| Swarith S. Shetty | A+ |
| Saisha Rai | A |
| Sanvi N. Shetty | A |
| Sumedh Shetty | B + |

**Pick & Speak - 10 to 16 Years**

| | |
|---|---|
| Drushya R. Shetty | 1st |
| Sanik D. Shetty | 2nd |
| Likith R. Shetty | 3rd |
| Avishi S. Shetty | Consolation |
| Sujal J Shetty | Consolation |
| Sukhi S Shetty | Consolation |

**Pick & Speak - 16 to 30 Years**

| | |
|---|---|
| Suneha Bhandary | 1st |
| Sushan Shetty | 2nd |
| Manasa Shetty | 3rd |

**Pick & Speak - Above 30 Yrs**

| | |
|---|---|
| Malathi J. Shetty | 1st |
| Mahesh Shetty | 2nd |
| Sumithra V. Shetty | 3rd |

**Shastriya Sangeeta - 6 to 10 Years**

| | |
|---|---|
| Ridhi R. Shetty | 1st |
| Bhuvan Shetty | 2nd |

**Shastriya Sangeeta - 10 to 16 Years**

| | |
|---|---|
| Samrudhi Shetty | 1st |
| Samarth Shetty | 2nd |
| Vaishnavi Shetty | 3rd |

**Shastriya Sangeeta - Above 16 Years**

| | |
|---|---|
| Ankitha S | 1st |
| Chandramathi Shetty | 2nd |
| Sumithra V. Shetty | 3rd |

**Sugama Sangeeta - 6 to 10 Years**

| | |
|---|---|
| Bhuvan Shetty | 1st |
| Brahmi R. Shetty | 2nd |
| Adithi R. Shetty | 3rd |
| Ridhi R. Shetty | 3rd |

**Sugama Sangeeta - 10 to 16 Years**

| | |
|---|---|
| Samrudhi Shetty | 1st |
| Samarth Shetty | 2nd |
| Drushya R. Shetty | 3rd |

**Sugama Sangeeta - 16 to 25 Yrs**

Ankitha S 1st
Madhuri Shetty 2nd

**Sugama Sangeeta - Above 25 Yrs**

Deepa R. Shetty 1st
Chandramathi Shetty 2nd
Shakila Shetty 3rd

**Film Song - 6 to 10 Years**

Bhuvan Shetty 1st
Adithi R. Shetty 2nd
Sauravi Shetty 3rd

**Film Song - 10 to 16 Years**

Drushya R. Shetty 1St
Samruddi Shetty 2nd
Samarth Shetty 3rd

**Film Song - Above 25 Years**

Vidya Shetty 1st
Srinivas K Shetty 2nd
Harish Shetty 3rd
K Nagendra 3rd

**Group Songs**

Sujatha Alva, Shakila Shetty, Sureka Shetty, Vidya Shetty, Latika Shetty – 1st
Supreetha Shetty, Deepa R Shetty, Chandramathi U Shetty, Chaitra Shetty – 2nd
Vaishnavi R Shetty, Vaibhavi R Shetty, Hitharthi A Shetty – 3rd

**Anthyakshari**

Rajan Rai, Shalini Rai, Chandini Rai – 1st
Harish Shetty, Mohandas Shetty, Sushan S. Shetty – 2nd
Athma Ram Alva, Kalavathi B. Shetty, Akila – 3rd
Akshatha Shetty, Suraksha Hegde, Prathik Shetty – 4th

**Indian Classical Solo - 6 to 10 years**

Adithi Jagadish 1st
Panchami A Shetty 2nd
Sukruthi Shetty 3rd
Ridhi R Shetty 3rd
Prachi P Shetty Consolation
Yuktha Rai Consolation

**Indian Classical Solo - 10 to 14 years**

Medhini A Shetty 1st

**Indian Classical Solo -14 to 18 years**

Shanvi S Shetty 1st

**Indian Classical Solo -18 to 35 years**

Raveeksha Rai 1st
Advika shetty 2nd

**Yakshagana 12 to 18 Years**

Manthram S Shetty 1st

**Folk Solo - 6 to 10 Years**

Ridhi R Shetty 1st
Bhuvan Shetty 2nd
Rishika Shetty 3rd
Varun Shetty Consolation
Deetya Rai Consolation

**Folk Solo - 10 to 14 Years**

Punarva S Shetty 1st
Bhumi S Shetty 2nd
Varsha Shetty 3rd

**Folk Solo - 14 to 18 Years**

Shanvi S Shetty 1st

**Folk Solo - 18 to 35 Years**

Raveeksha Rai 1st

**Folk Solo - Above 35 Years**

Sujatha Alva 1st

**Free Style Solo - 6 to 10 Yrs**

Ridhi R Shetty 1st
Aikya Shetty 2nd
Sanvi N Shetty 3rd
Brahmi R Shetty Consolation
Deetya Rai Consolation
Druthi Consolation

**Free Style Solo -10 to 14 Yrs**

Bhumi S Shetty 1st
Dhavana S Shetty 2nd
Medhini A Shetty 2nd
Varsha Shetty 2nd
Punarva S Shetty 3rd
Artham Shetty 3rd
Dhrushya S Shetty Consolation
Niha N Shetty Consolation
Krishna N Shetty Consolation

**Free Style Solo -14 to 18 Yrs**

Varsha V Shetty 1st
Samyam G Shetty 2nd
Sahaj Shetty 2nd
Sadhvi Shetty 3rd
Prasham Consolation

**Free Style Solo -18 to 35 Yrs**

Kaushik J Shetty 1st
Srujan N Sheka 2nd
Advika Shettty 3rd

**Group Dance**

Panchami A Shetty, Sukhi S Shetty, Sanvi N Shetty, Jesta R Hegde, Shresta R Hegde – **(Charming Girls)** 1st
Vaishnavi R Shetty, Vaibhavi R Shetty, Hitharthi A Shetty, Kavan N Sheka, Vaishnavi H Shetty, Trisha V Shetty, Nishvith Shetty, Thrupthi Shetty – **(Bolpu Group)** 1st
Reshma C Shetty, Sushma N Shetty, Sunita J Shetty, Priyadarshini Shetty, Shobha Naveen – **Kadala Barita Ponnulu** 2nd
Avani Shetty, Geetal Shetty, Sauravi Shetty – **(Porlu Group)** 3rd
Shamatha S Shetty, Siri Kumari, Shabari N Shetty – 3rd **(Shamatha Shetty & Group)**

# LIVE IT, LOVE IT, VALUE IT

[Infused bit of reference from: Geetopadesha]



Cherkady Sachidananda Shetty

"It is said "Once I am set-All set" ...... Is the cardinal principle to achieve excellence. Excellence is achieved by caring much, risking ahead, dreaming high and expecting more. It is so confusing that "what we want we don't get, what we get we are not satisfied, what we expect never happens and what we hate, not only happens, that generally repeats". If this is one aspect, simultaneously those who excelled are those who not only preached but also practiced. The great philosophers, scholars, leaders, eminent and distinguished personalities, in various spheres of human life, they practiced more than what they preached. The attainment of success in this direction in many cases inspite of perseverance, persistence, and enduring determination is dismal, reasons are obvious and explanatory.

After all what does a human being want out of life? Only that he leads a happy, healthy and successful life? In addition, his aspirations never ever stop unless he gets name, fame and glory. In many cases the endless hope end up with hopeless end. So why is that only one in one lakh or one in one million achieves desired goals, what are the others lacking in, where are they going wrong inspite of using their innate talents. Is it may be because of the effect of cosmic force or inadequate planning or guidance that makes them to land up and end up and ultimately to consider their efforts as futile.

Winston Churchill considered that blood, toll, tear and sweat are his excellence/ success. Mohandas Gandhi believed that Satya and Ahimsa are his excellence so became 'Mahatma'. Raja Harishchandra adhered to Satya, became 'Satya Harishchandra'. Theresa firmly believed that service to humanity is her excellence and success, so she became; 'Mother Theresa'. The entire universe considered them as great. Every dawn of the day the domain to which these great icons adhered was that their chance has just begun; the best jobs have not been started; the best work has still undone, thereby they have done their job marvelously. Their "live & love" left us an indelible foot print.

The law of Karma says where there is a law there is a loophole and where there is a loophole there is a lawyer and one engages himself a good lawyer so he can save himself from the law of Karma. A miscreant person even if he goes underground, abroad, or does any kind of influence he needs to face punishment; the universal truth is that where there is no love and value for our own Karma it is not worth doing it.

We have this earth, it is ours; the largest and deepest oceans, it is ours; we have uptil the vast boundaries of sky, it is ours. Who made this community, state and nation? one word answer 'We' -there is an 'I' in "We" so in between the conception and creation, emotion and response falls the shadow upon. So we need to set 'I'; once 'I'; is set "WE" would be set and "ALL" set. He is who knows the other is learned but the wise is the one who knows himself.

The nature never said that it would keep the sky always blue. Nature never promised sun without rain, joy without sorrow, peace without pain, at the same time nature undoubedtly promised 86,400 superfine polished 24 carat gold coins, call it as seconds of the day, they are either for your use or abuse. So we need to use it wisely.

Most Indians suffer unnecessary misery, emotions. If managing men, material, and money is economics, managing the emotion is psychology so everything emancipates from live, love and value.

Generally, today we have a big house, a small family, more degrees less common sense, advanced medicine, poor health, we have touched the moon and satellite neighbourers unknown, high income less peace of mind, high IQ less common sense, more knowledge less wisdom, no real friends in need, lots of humans no humanity, costly watch no time. Is it not a misery? We should overcome this with human values.

Let's briefly conclude that 'smooth roads never make a good driver, a clear sky never makes a good pilot, a silent sea never makes a good sailor. Let's live to struggle, lets love to struggle, lets try to value it and lets reap the worth out of it & that's it.

# Congratulations



Sannidhi S. Melanta

**Sannidhi S. Melanta** daughter of Sri N. Sathyananda Melanta (ex-executive committee member Bunts Sangha Bangalore) and Smt. Indira S. Melanta auditor and Tax consultant (Melanta & Co, Dr. Modii Hospital Road, Bangalore) has successfully completed C.A exam, in November

## ಅಭಿನಂದನೆಗಳು



ಜಿಯಾ ಆರ್. ಶೆಟ್ಟಿ ಹಾಲಾಡಿ

ನವದೆಹಲಿಯ 'ಕಥಾ' ಸಂಸ್ಥೆ ಡಿಸೆಂಬರ್ 26ರಿಂದ 28ರ ತನಕ ಆಯೋಜಿಸಿದ್ದ ರಾಷ್ಟ್ರಮಟ್ಟದ "ಕಥಾ ಉತ್ಸವ" ದಲ್ಲಿ ಭಾಗವಹಿಸಿದ್ದ ಪುಟಾಣಿ **ಜಿಯಾ ಆರ್. ಶೆಟ್ಟಿ ಹಾಲಾಡಿ** "Young Writers Award" ನ್ನು ಪಡೆದಿರುತ್ತಾಳೆ. ಬಸವೇಶ್ವರನಗರದ ನ್ಯಾಷನಲ್ ಅಕಾಡೆಮಿ ಫಾರ್ ಲರ್ನಿಂಗ್‌ನ ನಾಲ್ಕನೇ ತರಗತಿಯ ವಿದ್ಯಾರ್ಥಿನಿಯಾಗಿರುವ ಈ ಕಿರಿಯ ಲೇಖಕಿ ಸಂಘದ ಸದಸ್ಯರಾದ ಡಾ. ಸಪ್ನಾ ಶೆಟ್ಟಿ ಹಾಲಾಡಿ ಮತ್ತು ಶ್ರೀ ರವಿ ಕಿಶನ್ ಶೆಟ್ಟಿಯವರ ಸುಪುತ್ರಿ. ಬಂಟರ ಸಂಘವು ಇವಳನ್ನು ಅಭಿನಂದಿಸುವುದರೊಂದಿಗೆ ಅವಳ ಬರವಣಿಗೆಯ ಹವ್ಯಾಸ ಇದೇ ರೀತಿ ಮುಂದುವರಿಯಲಿ ಎಂದು ಹಾರೈಸುತ್ತದೆ.

# ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಹಾಗೂ ಸಾಂಸ್ಕೃತಿಕ ದಿನಾಚರಣೆ ಮತ್ತು 'ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ – II' ಶಿಲಾನ್ಯಾಸ

ಬೆಂಗಳೂರು ಬಂಟರ ಸಂಘ ತನ್ನ ಸಾರ್ಥಕ 60 ವರ್ಷಗಳನ್ನು ಯಶಸ್ವಿಯಾಗಿ ಪೂರೈಸುತ್ತಿರುವ ಶುಭ ಸಂದರ್ಭದಲ್ಲಿ ಶೈಕ್ಷಣಿಕ ಸೇವೆಯನ್ನು ಇನ್ನಷ್ಟು ವಿಸ್ತರಿಸುವ ಉದ್ದೇಶದಿಂದ ಯಲಚಗುಪ್ಪೆಯಲ್ಲಿ ಖರೀದಿಸಿದ ಜಾಗದಲ್ಲಿ ನೂತನ ಶೈಕ್ಷಣಿಕ ಸಂಕೀರ್ಣವನ್ನು ಪ್ರಾರಂಭಿಸುವ ಯೋಜನೆಗೆ ಸಂಘವು ಮುಂದಾಗಿದೆ.

ನೂತನ ಶೈಕ್ಷಣಿಕ ಸಂಕೀರ್ಣ 'ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ – II' ಇದರ ಶಿಲಾನ್ಯಾಸ ಕಾರ್ಯಕ್ರಮ ಹಾಗೂ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಹಾಗೂ ಸಾಂಸ್ಕೃತಿಕ ದಿನಾಚರಣೆಯನ್ನು ಜಂಟಿಯಾಗಿ ದಿನಾಂಕ 20.01.2019 ರಂದು ಯಲಚಗುಪ್ಪೆಯಲ್ಲಿ ಸಂಘದ ಸದಸ್ಯರು, ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರ ಸಮ್ಮುಖದಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು.

ಸಂಕೀರ್ಣದ ಭೂಮಿ ಪೂಜೆಯನ್ನು ಬೆಳಿಗ್ಗೆ 8.30 ಕ್ಕೆ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಯೋಜನಾ ಸಮಿತಿಯ ಚೇರ್‌ಮೆನ್, ಸಂಘದ ಸದಸ್ಯರುಗಳು, ಶಾಲೆಯ ಪ್ರಾಂಶುಪಾಲರು ಹಾಗೂ ಸಿಬ್ಬಂದಿಗಳ ಸಮ್ಮುಖದಲ್ಲಿ ನೆರವೇರಿಸಲಾಯಿತು.

ಸಂಜೆ ನಡೆದ ಸಭಾ ಕಾರ್ಯಕ್ರಮದಲ್ಲಿ ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ.ಶೆಟ್ಟಿಯವರು ಕಾರ್ಯಕ್ರಮಕ್ಕೆ ಆಗಮಿಸಿದ ಸರ್ವರನ್ನೂ ಆತ್ಮೀಯವಾಗಿ ಸ್ವಾಗತಿಸಿದರು. ಶ್ರೀ ಚಂದ್ರಕಾಂತ ಶೆಟ್ಟಿ ಮತ್ತು ತಂಡದವರು ಪ್ರಾರ್ಥನೆಯನ್ನು ನಡೆಸಿಕೊಟ್ಟರು. ಶಿಲಾನ್ಯಾಸ ನೆರವೇರಿಸಿದ ರಾಜ್ಯದ ಮಾನ್ಯ ಗೃಹ ಮಂತ್ರಿಗಳಾದ ಶ್ರೀ ಎಂ.ಬಿ.ಪಾಟೀಲರು ಬಂಟರ ಸಂಘದ ಶೈಕ್ಷಣಿಕ ಸೇವೆಯನ್ನು ಶ್ಲಾಘಿಸಿ ಬಂಟರು ಬಹಳ ಶ್ರಮಜೀವಿಗಳು ಹಾಗೂ ಹೋರಾಟ ಮನೋಭಾವನೆ ಉಳ್ಳವರು, ಶಿಕ್ಷಣ, ಬ್ಯಾಂಕಿಂಗ್, ಹೋಟೇಲ್ ಉದ್ಯಮ, ಸಿನಿಮಾ ಮೊದಲಾದ ಕ್ಷೇತ್ರದಲ್ಲಿ ಇವರು ಬಹಳ ಮುಂಚೂಣಿಯಲ್ಲಿದ್ದಾರೆ ಎಂದರು. ಬಂಟರ ಸಂಘಗಳು ವಿಶ್ವ ವ್ಯಾಪಿಯಾಗಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಶ್ರೀ ಜಿ.ಟಿ. ದೇವೇಗೌಡರು ಶಿಕ್ಷಣದ ಜೊತೆಗೆ ಉದ್ಯೋಗ ಕಲ್ಪಿಸುವಲ್ಲಿ ಹೆಚ್ಚಿನ ಒತ್ತು ನೀಡಬೇಕೆಂದು ಕರೆ ನೀಡಿದರು. ಬಂಟರು ಸಮಾಜಕ್ಕೆ ನೀಡುತ್ತಿರುವ ಕೊಡುಗೆ ಅನನ್ಯವಾಗಿದ್ದು, ಶಿಸ್ತು, ದಕ್ಷತೆ, ಪ್ರಾಮಾಣಿಕತೆಗೆ ಇವರು ಹೆಸರಾಗಿದ್ದಾರೆ. ಪ್ರಪಂಚದ ಯಾವ ಮೂಲೆಯಲ್ಲಾದರೂ ಉತ್ತಮ ಬದುಕು ಕಟ್ಟಿಕೊಳ್ಳುವ ಶಕ್ತಿ ಬಂಟರಿಗಿದೆ. ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿರುವ ಇವರು ವಿವಿಧ ಉದ್ದಿಮೆಗಳನ್ನು ಸ್ಥಾಪಿಸಿ ಲಕ್ಷಾಂತರ ಮಂದಿಗೆ ಉದ್ಯೋಗ ನೀಡಿರುತ್ತಾರೆ ಎಂದರು.

ಆಲ್‌ಕಾರ್ಗೋ ಸಂಸ್ಥೆಯ ಸಂಸ್ಥಾಪಕ ಶ್ರೀ ಶಶಿಕಿರಣ್ ಶೆಟ್ಟಿಯವರು ಮಾತನಾಡಿ, ಬೆಂಗಳೂರು ಬಂಟರ ಸಂಘವು ಇನ್ನಷ್ಟು ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸಲಿ ಎಂದು ಆಶಿಸಿ, ಈ ಎಲ್ಲಾ ಯೋಜನೆಗಳಿಗೆ ತಮ್ಮ ಪ್ರೋತ್ಸಾಹ ಮತ್ತು ಸಹಕಾರ ಸದಾ ಇರುತ್ತದೆ ಎಂದರು.

ಶಾಲಾಡಳಿತ ಮಂಡಳಿಯ ಚೇರ್‌ಮೆನ್ ಡಾ. ಆರ್.ಎನ್.ಶೆಟ್ಟಿಯವರು ಮಾತನಾಡಿ "ಉನ್ನತ ಮಟ್ಟದ ಶಿಕ್ಷಣವನ್ನು ನೀಡುವುದು ನಮ್ಮ ಉದ್ದೇಶ. ನಮ್ಮ ಶೈಕ್ಷಣಿಕ ಸಂಸ್ಥೆಯನ್ನು ಇನ್ನಷ್ಟು ವಿಸ್ತರಿಸುವ ಮಹದಾಸೆ ಈಗ ಈಡೇರುತ್ತಿರುವುದು ಸಂತಸವನ್ನು ತಂದಿದೆ" ಎಂದರು. ಯೋಜನಾ ಸಮಿತಿಯ ಚೇರ್‌ಮೆನ್ ಶ್ರೀ ಕೆ. ಪ್ರಕಾಶ್ ಶೆಟ್ಟಿಯವರು ಮಾತನಾಡಿ, ಈ ಯೋಜನೆಯ ಜವಾಬ್ದಾರಿಯನ್ನು ತನಗೆ ವಹಿಸಿದ್ದಕ್ಕೆ ಸಂತಸ ವ್ಯಕ್ತಪಡಿಸುತ್ತಾ, ವಿನೂತನ ಶೈಲಿಯ ಶಾಲಾ ಸಂಕೀರ್ಣವನ್ನು ರೂಪಿಸಿ, ಅಂತಾರಾಷ್ಟ್ರೀಯ ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಯೋಜನೆ ರೂಪಿಸಲಾಗುವುದು. ಹಾಗೆಯೇ ಬಂಟರ ಸಂಘದ ಎಲ್ಲಾ ಕಾರ್ಯಯೋಜನೆಗಳಿಗೆ ತನ್ನ ಸಂಪೂರ್ಣ ಸಹಕಾರ ಹಾಗೂ ಪ್ರೋತ್ಸಾಹ ನಿರಂತರವಾಗಿರುತ್ತದೆ ಎನ್ನುವ ಭರವಸೆ ನೀಡಿದರು.

ಗೌರವ ಅತಿಥಿಗಳಾಗಿ ಭಾಗವಹಿಸಿದ್ದ ಎಸ್.ಎಂ.ಶೆಟ್ಟಿ ಶೈಕ್ಷಣಿಕ ಸಂಸ್ಥೆಗಳ ಚೇರ್‌ಮೆನ್ ಸಿ.ಎ. ಶಂಕರ್ ಬಿ. ಶೆಟ್ಟಿ ಹಾಗೂ ಮಹೇಶ್ ಎಡುಕೇರ್ ಲಿಮಿಟೆಡ್‌ನ ಚೇರ್‌ಮೆನ್ ಶ್ರೀ ಮಹೇಶ್ ಶೆಟ್ಟಿಯವರು ಬೆಂಗಳೂರು ಬಂಟರ ಸಂಘದ ನೂತನ ಶೈಕ್ಷಣಿಕ ಯೋಜನೆಗೆ ಶುಭಹಾರೈಸಿದರು. ಈ ಯೋಜನೆಯ ರೂಪು–ರೇಷೆಗಳ ವಿವರಗಳನ್ನೊಳಗೊಂಡ

ಕಿರುಪ್ರಾತ್ಯಕ್ಷಿಕೆಯನ್ನು ಸಂಕೀರ್ಣದ ವಾಸ್ತುಶಿಲ್ಪಿ ಶ್ರೀ ಅನುಪ್ ನಾಯಕ್ ಪ್ರಸ್ತುತ ಪಡಿಸಿದರು.

ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆಗೈದ ಶ್ರೀ ಪ್ರಕಾಶ್ಚಂದ್ರ ಶೆಟ್ಟಿ – ಚೇರ್‌ಮೆನ್ ಹಾಗೂ ಮ್ಯಾನೇಜಿಂಗ್ ಟ್ರಸ್ಟಿ ಜಿ.ಎಂ.ವಿದ್ಯಾನಿಕೇತನ ಪಬ್ಲಿಕ್ ಶಾಲೆ ಬ್ರಹ್ಮಾವರ, ಶ್ರೀಮತಿ ಅನುಪಮಾ ಎಸ್. ಶೆಟ್ಟಿ – ಜಂಟಿ ಆಡಳಿತ ಟ್ರಸ್ಟಿ, ಬಾಂಡ್ಯ ಎಜುಕೇಶನ್ ಟ್ರಸ್ಟ್ ಕುಂದಾಪುರ ಹಾಗೂ ಶ್ರೀಮತಿ ಕೃಪಾ ಪಿ. ಶೆಟ್ಟಿ – ಸಂಸ್ಥಾಪಕ ನಿರ್ದೇಶಕಿ ಶ್ರೀ ಶಿವನಿಕೇತನ ಶಾಲೆ ತಮಿಳುನಾಡು ಇವರುಗಳನ್ನು ಗಣ್ಯರ ಸಮ್ಮುಖದಲ್ಲಿ ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು "ಸಂಘದ ದಾನಿಗಳು, ಹಿರಿಯರು, ಮಾಜಿ ಅಧ್ಯಕ್ಷರುಗಳ ಸಲಹೆ–ಸಹಕಾರ, ಆಶೀರ್ವಾದದೊಂದಿಗೆ ಈ ಯೋಜನೆಯನ್ನು ಮುನ್ನಡೆಸುವ ಜವಾಬ್ದಾರಿ ನಮ್ಮ ಸಮಿತಿಯ ಮೇಲಿದ್ದು ಅದನ್ನು ಸಮರ್ಥವಾಗಿ ನಿರ್ವಹಿಸಲು ಕಟಿಬದ್ಧರಾಗಿದ್ದೇವೆ. ಶಾಲಾಡಳಿತ ಮಂಡಳಿ ಸದಸ್ಯರು ಹಾಗೂ ಮಾಜಿ ಅಧ್ಯಕ್ಷರು ನಮ್ಮೊಂದಿಗೆ ಇಂದು ವೇದಿಕೆ ಹಂಚಿಕೊಳ್ಳುತ್ತಿರುವುದು ಸಂತಸವನ್ನು ತಂದಿದೆ" ಎಂದರು.

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಹಾಗೂ ಸಾಂಸ್ಕೃತಿಕ ದಿನಾಚರಣೆಯ ಪ್ರಯುಕ್ತ ವಿವಿಧ ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದ ಸ್ಪರ್ಧಿಗಳಿಗೆ ಬಹುಮಾನ ವಿತರಣೆಯನ್ನು ಮುಖ್ಯ ಅತಿಥಿಗಳಾದ ಸಿಎ. ಶಂಕರ್ ಶೆಟ್ಟಿ, ಶ್ರೀ ಪಟ್ಲ ಸತೀಶ್ ಶೆಟ್ಟಿಯವರು ನಡೆಸಿಕೊಟ್ಟರು. ಸಾಹಿತ್ಯ, ಕಲೆ, ಕ್ರೀಡೆ, ಶೈಕ್ಷಣಿಕ ಹಾಗೂ ಇತರ ಕ್ಷೇತ್ರದ ಸಾಧಕರಿಗೆ ದಾನಿಗಳು ಕೊಡಮಾಡಿದ ದತ್ತಿ ಪ್ರಶಸ್ತಿಗಳನ್ನು ಗಣ್ಯರು ವಿತರಿಸಿದರು.

ಕ್ರೀಡಾ ಕ್ಷೇತ್ರದ ಸಾಧನೆಗಾಗಿ ಸಂಘದ ಹಿರಿಯ ಸದಸ್ಯೆ ಶ್ರೀಮತಿ ಮುಕ್ತಾ ಯು.ಶೆಟ್ಟಿ ಹಾಗೂ ಪ್ಯಾರಾಲಿಂಪಿಂಕ್ ಆಟಗಾರ ಶ್ರೀ ವಿಶ್ವಾಸ್ ಕೆ.ಎಸ್. ಇವರುಗಳನ್ನು ಗಣ್ಯರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು.

ಸಂಘದ ಪದಾಧಿಕಾರಿಗಳು, ಮಾಜಿ ಅಧ್ಯಕ್ಷರುಗಳು, ಶಾಲಾಡಳಿತ ಮಂಡಳಿಯ ಸದಸ್ಯರು ಹಾಗೂ ಇತರ ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ ಪಟ್ಲ ಶ್ರೀ ಸತೀಶ್ ಶೆಟ್ಟಿಯವರ ತಂಡದಿಂದ ನಡೆದ ಶ್ರೀ ರಾಧಾವಿಲಾಸ ಯಕ್ಷಗಾನ ನಾಟ್ಯ ವೈಭವ ನೆರೆದವರ ಮೆಚ್ಚುಗೆ ಗಳಿಸಿತು. 'ಟೀಂ 5678 ಡಾನ್ಸ್ ಅಕಾಡೆಮಿ' ಪ್ರಸ್ತುತ ಪಡಿಸಿದ ನೃತ್ಯ ಪ್ರದರ್ಶನ, 'ಆಗಾಜ್ ಸ್ಕೂಲ್ ಆಫ್ ಮ್ಯೂಸಿಕ್' ಇವರಿಂದ ಸಂಗೀತ ಕಾರ್ಯಕ್ರಮ ಹಾಗೂ ಸಂಘದ ಸದಸ್ಯರ ವಿಶೇಷ ನೃತ್ಯ ಕಾರ್ಯಕ್ರಮ ಸುಂದರವಾಗಿ ಮೂಡಿಬಂತು. ಸಭಾಕಾರ್ಯಕ್ರವನ್ನು ಖ್ಯಾತ ನಿರೂಪಕ ಶ್ರೀ ಶಂಕರ್ ಪ್ರಕಾಶ್ ಅಚ್ಚುಕಟ್ಟಾಗಿ ನಿರ್ವಹಿಸಿದರು.

ಬಂಟರ ಸಂಘದಲ್ಲಿ ಅಮ್ಮಣ್ಣಿ ರಾಮಣ್ಣ ಶೆಟ್ಟಿ ಟ್ರಸ್ಟ್ ಮೂಲಕ 27 ವರ್ಷಗಳ ಹಿಂದೆ 'ರಾಮಕೃಷ್ಣ ವಿದ್ಯಾನಿಕೇತನ' ಎನ್ನುವ ಹೆಸರಿನಲ್ಲಿ ವಿದ್ಯಾಸಂಸ್ಥೆ ಸ್ಥಾಪಿಸಲು ಕಾರಣೀಕರ್ತರಾದ ದಿವಂಗತ ಶ್ರೀ ಕೆ.ಪಿ. ರಾಮಣ್ಣ ಶೆಟ್ಟಿ ಮತ್ತು ತಮ್ಮ ಅಧ್ಯಕ್ಷೀಯ ಅವಧಿಯಲ್ಲಿ ನೂತನ ಶಾಲಾ ಕಟ್ಟಡವನ್ನು ಅತ್ಯಂತ ಶೀಘ್ರವಾಗಿ ನಿರ್ಮಿಸುವಲ್ಲಿ ಶ್ರಮವಹಿಸಿ ಡಾ. ಆರ್.ಎನ್.ಶೆಟ್ಟಿಯವರ ಉದಾರ ನೆರವಿನಿಂದ 'ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ' ಎನ್ನುವ ಹೆಸರಿನೊಂದಿಗೆ ವಿದ್ಯಾಸಂಸ್ಥೆಗೆ ಹೊಸ ರೂಪವನ್ನು ನೀಡಿದ ಸಂಘದ ಮಾಜಿ ಅಧ್ಯಕ್ಷ ದಿವಂಗತ ಶ್ರೀ ಐ.ಎಂ.ಜಯರಾಮ ಶೆಟ್ಟಿಯವರ ಹೆಸರನ್ನು ವೇದಿಕೆಗೆ ಇಡಲಾಗಿತ್ತು. ಬಂಟರ ಸಂಘದ ಶ್ರೇಯೋಭಿವೃದ್ಧಿಗೆ, ಸಂಘಟನೆಗೆ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಕಳಕಳಿಗಾಗಿ ತಮ್ಮ ನಿವೃತ್ತ ಜೀವನದ ಬಹುಪಾಲನ್ನು ಮೀಸಲಿಟ್ಟ ಸಂಘದ ಮಾಜಿ ಅಧ್ಯಕ್ಷ ದಿ. ಕೆ. ಶ್ರೀನಿವಾಸ ಆಳ್ವ ಅವರ ಹೆಸರನ್ನು ಅಂದಿನ ಕಾರ್ಯಕ್ರಮದ ಭೋಜನಶಾಲೆಗೆ ಹಾಗೂ ಇತ್ತೀಚೆಗೆ ನಿಧನರಾದ ಸಮುದಾಯ ದಕ್ಷ ಐ.ಪಿ.ಎಸ್. ಅಧಿಕಾರಿ ಡಾ. ಮಧುಕರ ಶೆಟ್ಟಿಯವರ ಹೆಸರನ್ನು ಸಂಕೀರ್ಣದ ಸ್ವಾಗತ ದ್ವಾರಕ್ಕೆ ಇಡಲಾಗಿತ್ತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಸದಸ್ಯರಿಗೆ, ಶಾಲಾ ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಸಂಘದ ಸಂಕೀರ್ಣದಿಂದ ಹಾಗೂ ನಗರದ ವಿವಿಧೆಡೆಯಿಂದ ವಾಹನ ವ್ಯವಸ್ಥೆ ಮಾಡಲಾಗಿತ್ತು. ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರು ಹಾಗೂ ಯೋಜನಾ ಸಮಿತಿಯ ಸಂಚಾಲಕರು ಹಾಗೂ ಸದಸ್ಯರು ತಮಗೆ ನೀಡಿದ ಜವಾಬ್ದಾರಿಯನ್ನು ಬಹಳ ಚೆನ್ನಾಗಿ ನಿರ್ವಹಿಸುವುದರೊಂದಿಗೆ ನೂತನ ಆವರಣದಲ್ಲಿ ಸುವ್ಯವಸ್ಥಿತವಾಗಿ ಹಾಗೂ ಅಚ್ಚುಕಟ್ಟಾಗಿ ಕಾರ್ಯಕ್ರಮ ಆಯೋಜಿಸುವಲ್ಲಿ ಯಶಸ್ವಿಯಾದರು.

# ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಹಾಗೂ ಸಾಂಸ್ಕೃತಿಕ ದಿನಾಚರಣೆ ಮತ್ತು 'ಬಂಟರ ಸಂಘ ಆರ್. ಎನ್.ಎಸ್. ವಿದ್ಯಾನಿಕೇತನ - II' ಶಿಲಾನ್ಯಾಸ

## ಅವಿಸ್ಮರಣೀಯ ಕ್ಷಣಗಳು

### ಭೂಮಿ ಪೂಜೆ










### ಸಭಾ ಕಾರ್ಯಕ್ರಮ









## ಶೈಕ್ಷಣಿಕ ಕ್ಷೇತ್ರದ ಸಾಧಕರಿಗೆ ಗೌರವಾರ್ಪಣೆ







## ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ






## ಕ್ರೀಡಾ ಸಾಧಕರಿಗೆ ಗೌರವಾರ್ಪಣೆ





## ಸಾಂಸ್ಕೃತಿಕ ಕಾರ್ಯಕ್ರಮ












ಸ್ನೇಹ ಚಿಂತನೆ ಫೆಬ್ರವರಿ 2019


CREDAI BENGALURU

# UPGRADE
## TO A PREMIUM LIFESTYLE

ANIKA redwood homes




**BBMP APPROVED**
Plan Approval No.
BBMP/ADDL/JDSOUTH/LP-0120/16-17

**RERA**
PRM/KA/RERA/1251/310/PR/190108/002281
rera.karnataka.gov.in

**PMAY**

Avail benefits of PMAY scheme, Get interest Subsidy up to 4% and also save up to Rs. 2.67 lakhs on your first home. The size eligibility is up to 2151 sq.ft (Carpet Area) and the annual income of the beneficiary family must be Rs. 1800000 or less. Scheme is valid up to 31st March 2019




Google Q R code for location

RERA COMPLIANT, ULTRA MODERN 2 & 3 BHK APARTMENTS
**AT COCONUT GARDEN, ADJACENT TO CHANDRA LAYOUT**
AT AN AFFORDABLE PRICE

Imagine a life that provides all the comforts of a modern lifestyle. Imagine it to be well spaced out, pervading with abundant greenery and light. Imagine a modern hypermarket within its confines. And thoughtful amenities too. Imagine it all to be for real, in Coconut Garden, adjacent to Chandra Layout.
Welcome to Anika Redwood Homes – A RERA certified premium residential project comprising of 2 and 3 BHK apartments. Blessed with lots of green spaces, beautifully laid out landscapes and ultra-modern facilities, it offers you the next level of contemporary living.

### THE PREMIUM COMFORTS

Amenities at Anika Redwood Homes you make privileged and truly cared for they're thoughtfully conceptualized to provide you the best of comforts and convenience.
Just to name a few:
- Infinity Pool with landscaped roof gardens
- Gymnasium
- Multipurpose Hall
- Children Play Area
- Hypermarket

### THE PREMIUM NECESSITIES

Features at Anika Redwood Homes add to the quality of your life. Sustainable by nature and futuristic by design, they're meant to make your life truly delightful.
Project attributes
- Water Treatment Plant
- Specialized Water Tanks
- Sewage Treatment Plant
